ಸಂಪುಟ 01 | ಸಂಚಿಕೆ 145 | ಶುಕ್ರವಾರ 31 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಶ್ವ ರೇಂಜರ್ ದಿನ (World Ranger Day) ಅರಣ್ಯ, ವನ್ಯಜೀವಿ ಮತ್ತು ಪರಿಸರ ಸಂರಕ್ಷಣೆಗೆ ಶ್ರಮಿಸುವ ರೇಂಜರ್‌ಗಳ ಸೇವೆಯನ್ನು ಗೌರವಿಸುವ ಹಾಗೂ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಣ ತ್ಯಾಗ ಮಾಡಿದ ರೇಂಜರ್‌ಗಳನ್ನು ಸ್ಮರಿಸುವ ದಿನ.

2)ಸಿಸ್ಟಮ್ ಆಡಳಿತಗಾರರ ಮೆಚ್ಚುಗೆ ದಿನ (System Administrator Appreciation Day / SysAdmin Day) ಪ್ರತಿ ವರ್ಷದ ಜುಲೈ ತಿಂಗಳ ಕೊನೆಯ ಶುಕ್ರವಾರ ಆಚರಿಸಲಾಗುತ್ತದೆ. 2026ರಲ್ಲಿ ಇದು ಜುಲೈ 31ರಂದು ಬಂದಿದೆ. ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳನ್ನು ನಿರ್ವಹಿಸುವ ಸಿಸ್ಟಮ್ ಆಡಳಿತಗಾರರ ಸೇವೆಯನ್ನು ಗೌರವಿಸುವ ದಿನ.

3)ರಾಷ್ಟ್ರೀಯ ಅವಕಾಡೊ ದಿನ (National Avocado Day) ಮುಖ್ಯವಾಗಿ ಅಮೆರಿಕಾದಲ್ಲಿ ಅವಕಾಡೊ ಹಣ್ಣಿನ ಪೌಷ್ಟಿಕತೆ ಮತ್ತು ಆರೋಗ್ಯ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸುವ ದಿನ.

4) ರಾಷ್ಟ್ರೀಯ ಮಿಶ್ರ ತಳಿ ನಾಯಿಗಳ ದಿನ (National Mutt Day) ಮಿಶ್ರ ತಳಿಯ ನಾಯಿಗಳನ್ನು ದತ್ತು ಪಡೆಯಲು ಪ್ರೋತ್ಸಾಹಿಸುವ ದಿನ.

5)ಶಹೀದ್ ಉದಮ್ ಸಿಂಗ್ ಹುತಾತ್ಮರ ದಿನ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡಕ್ಕೆ ಪ್ರತೀಕಾರ ತೀರಿಸಿದ ಸ್ವಾತಂತ್ರ್ಯ ಹೋರಾಟಗಾರ ಶಹೀದ್ ಉದಮ್ ಸಿಂಗ್ ಅವರ ತ್ಯಾಗವನ್ನು ಸ್ಮರಿಸುವ ದಿನ.

## ಸುಭಾಷಿತ

ಧ್ಯಾನ ಹೆಚ್ಚಾದಂತೆ ಜ್ಞಾನ ಹೆಚ್ಚಾಗುವುದು ! ಜ್ಞಾನ ಹೆಚ್ಚಾದಂತೆ ಮೌನ ಹೆಚ್ಚಾಗುವುದು!

–ಬುದ್ಧ

ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಹೆಚ್ಚಿನ ಹೊರಹರಿವು, ವಿದೇಶಗಳಲ್ಲಿ ಭಾರತೀಯ ಸಂಸ್ಥೆಗಳ ಹೂಡಿಕೆಯಿಂದಾಗಿ ನಿವ್ವಳ ಎಫ್‌ಡಿಐನಲ್ಲಿ ಕುಸಿತ

ನೈಜ್ಯ ದೆಸೆ ನ್ಯೂಸ್

ನವದೆಹಲಿ: ಕಳೆದ ಕೆಲವು ವರ್ಷಗಳಲ್ಲಿ ಭಾರತಕ್ಕೆ ಆಗಮಿಸಿರುವ ನಿವ್ವಳ ವಿದೇಶಿ ನೇರ ಹೂಡಿಕೆ ಎಫ್‌ಡಿಐನಲ್ಲಿ ತೀವ್ರ ಕುಸಿತ ಕಂಡಿದ್ದು, ವಿದೇಶಿ ಹೂಡಿಕೆದಾರರು ಭಾರತದಿಂದ ಹೂಡಿಕೆ ಹಿಂಪಡೆಯುವ ಪ್ರಮಾಣ ಮಾತ್ರ ನಿರಂತರ ಏರಿಕೆ ಕಂಡಿದೆ ಎಂಬ ಮಾಹಿತಿ ಕೇಂದ್ರ ಸರ್ಕಾರವೇ ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಬಹಿರಂಗವಾಗಿದೆ.

ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಡಾ.ಜಾನ್ ಬ್ರಿಟ್ಟಾಸ್ ಕೇಳಿದ ಪ್ರಶ್ನೆಗೆ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಉತ್ತರ ನೀಡಿದ್ದು, 2022–23ರಿಂದ 2025–26ರವರೆಗಿನ ನಿವ್ವಳ ಎಫ್‌ಡಿಐ, ವಿದೇಶಿ ಹೂಡಿಕೆದಾರರ ಹೂಡಿಕೆ ಹಿಂಪಡೆಯುವಿಕೆ ಹಾಗೂ ಅದರ ಹಿಂದಿನ ಕಾರಣಗಳನ್ನು ವಿವರಿಸಿದ್ದಾರೆ.

ಕೇಂದ್ರ ಸರ್ಕಾರದ ಉತ್ತರದ ಪ್ರಕಾರ, ಭಾರತಕ್ಕೆ ಬಂದ ನಿವ್ವಳ ವಿದೇಶಿ ನೇರ ಹೂಡಿಕೆ 2022–23ರಲ್ಲಿ 27.99 ಬಿಲಿಯನ್ ಅಮೆರಿಕನ್ ಡಾಲರ್ ಆಗಿದ್ದರೆ, 2023–24ರಲ್ಲಿ ಅದು 10.13 ಬಿಲಿಯನ್ ಡಾಲರ್‌ಗೆ ಇಳಿಕೆಯಾಗಿದೆ. 2024–25ರಲ್ಲಿ ಮತ್ತಷ್ಟು ಕುಸಿದು ಕೇವಲ 0.96 ಬಿಲಿಯನ್ ಡಾಲರ್‌ಗೆ ತಲುಪಿದ್ದು,




2025–26ರಲ್ಲಿ ಸ್ವಲ್ಪ ಚೇತರಿಕೆ ಕಂಡು 6.95 ಬಿಲಿಯನ್ ಡಾಲರ್ ದಾಖಲಾಗಿದೆ.

2022–23ರಲ್ಲಿ 27.99, 2023–24ರಲ್ಲಿ 10.13, 2024–25ರಲ್ಲಿ 0.96, 2025–26ರಲ್ಲಿ 6.95 ಬಿಲಿಯನ್ ಅಮೆರಿಕನ್ ಡಾಲರ್ ಹೂಡಿಕೆಯಾಗಿದೆ. ಈ ಅಂಕಿ–ಅಂಶಗಳ ಪ್ರಕಾರ, 2022–23ರೊಂದಿಗೆ ಹೋಲಿಸಿದರೆ 2024–25ರಲ್ಲಿ ನಿವ್ವಳ ಎಫ್‌ಡಿಐ ಸುಮಾರು ಶೇ.97ರಷ್ಟು ಕುಸಿತ ಕಂಡಿದೆ. ಇದೇ ವೇಳೆ, ವಿದೇಶಿ ಹೂಡಿಕೆದಾರರು ಭಾರತದಿಂದ ಮರುಪಾವತಿ ಹಾಗೂ ಹೂಡಿಕೆ ಹಿಂಪಡೆಯುವಿಕೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.2022–23ರಲ್ಲಿ 29.35, 2023–24ರಲ್ಲಿ 44.47, 2024–25ರಲ್ಲಿ 51.49, 2025–26ರಲ್ಲಿ 54.04 ಬಿಲಿಯನ್ ಅಮೆರಿಕನ್ ಡಾಲರ್ ಎಫ್‌ಡಿಐ ಹೂಡಿಕೆ ಹಿಂಪಡೆಯಲಾಗಿದೆ.

ನಾಲ್ಕು ವರ್ಷಗಳ ಅವಧಿಯಲ್ಲಿ ವಿದೇಶಿ ಹೂಡಿಕೆದಾರರು ಒಟ್ಟು 179.35 ಬಿಲಿಯನ್ ಅಮೆ ರಿಕನ್ ಡಾಲರ್‌ಗಳನ್ನು ಮರುಪಾವತಿ ಮತ್ತು ಹೂಡಿಕೆ ಹಿಂಪಡೆಯುವಿಕೆ ಮೂಲಕ ಭಾರತದಿಂದ ಹೊರತೆಗೆದಿದ್ದಾರೆ ಎಂದು ಅಂಕಿಅಂಶಗಳು ತಿಳಿಸುತ್ತವೆ.

ರಾಜ್ಯವಾರು ಮತ್ತು ವಲಯವಾರು ನಿವ್ವಳ ಎಫ್‌ಡಿಐ ಮಾಹಿತಿಯನ್ನು ಸರ್ಕಾರ ಪ್ರತ್ಯೇಕವಾಗಿ ನಿರ್ವಹಿಸುವುದಿಲ್ಲ ಎಂದು ಸಚಿವರು ತಿಳಿಸಿದ್ದಾರೆ. ಆದರೆ, ಎಫ್‌ಡಿಐ ಇಕ್ವಿಟಿ ಹೂಡಿಕೆಯ ರಾಜ್ಯವಾರು (ಮೊದಲ 15 ರಾಜ್ಯಗಳು) ಹಾಗೂ ವಲಯವಾರು (ಮೊದಲ 15 ಕ್ಷೇತ್ರಗಳು) ಮಾಹಿತಿಯನ್ನು ಪ್ರತ್ಯೇಕ ಅನುಬಂಧದಲ್ಲಿ ನೀಡಲಾಗಿದೆ.

ಹೂಡಿಕೆ ಹಿಂಪಡೆಯುವಿಕೆ ಹೆಚ್ಚಾಗಿರುವ ಕಾರಣಗಳ ಕು–ರಿತು ಸರ್ಕಾರ ನೀಡಿದ ವಿವರಣೆಯಲ್ಲಿ, 2025–26ರಲ್ಲಿ ಭಾರತ ದಾಖಲೆಯ 94.84 ಬಿಲಿಯನ್ ಅಮೆರಿಕನ್ ಡಾಲರ್ ಒಟ್ಟು ಎಫ್‌ಡಿಐ ಹರಿವು ದಾಖಲಿಸಿದ್ದು, ಇದು 2024–25ರ 80.61 ಬಿಲಿಯನ್ ಡಾಲರ್‌ಗಿಂತ ಹೆಚ್ಚಾಗಿದೆ ಎಂದು ತಿಳಿಸಿದೆ. ಇತ್ತೀಚಿನ ವರ್ಷಗಳಲ್ಲಿ ನಿವ್ವಳ ಎಫ್‌ಡಿಐ ಕುಸಿತಕ್ಕೆ ವಿದೇಶಿ ಹೂಡಿಕೆದಾರರ ಮರುಪಾವತಿ ಮತ್ತು ಹೂಡಿಕೆ ಹಿಂಪಡೆಯುವಿಕೆ ಹೆಚ್ಚಾಗಿರುವುದು ಪ್ರಮುಖ ಕಾರಣವಾಗಿದೆ ಎಂದು ಸರ್ಕಾರ ಹೇಳಿದೆ. ಜೊತೆಗೆ, 2022ರಲ್ಲಿ ಉದಾರೀಕ–ರಿಸಲಾದ ಸಾಗರೋತ್ತರ ನೇರ ಹೂಡಿಕೆ ನಿಯಮಗಳ ಪರಿಣಾಮವಾಗಿ ಭಾರತೀಯ ಕಂಪನಿಗಳು ವಿದೇಶಗಳಲ್ಲಿ ಹೆಚ್ಚಿನ 2ನೇ ಪುಟಕ್ಕೆ

# ರೈಲ್ವೆ ಮಾರ್ಗ ಹೋರಾಟ ಸಮಿತಿ ಪದಾಧಿಕಾರಿಗಳ ಸಭೆ.

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಆಲಮಟ್ಟಿಯಿಂದ ಯಾದಗಿರಿ ನಗರಕ್ಕೆ ಸಂಪರ್ಕ ಕಲ್ಪಿಸುವ ರೈಲ್ವೆ ಮಾರ್ಗ ಆರಂಭಿಸಲು ಅಸ್ತಿತ್ವದಲ್ಲಿ ಬಂದ ತಾಳಿಕೋಟಿ ರೈಲ್ವೆ ಮಾರ್ಗ ಹೋರಾಟ ಸಮಿತಿಯ ಪದಾಧಿಕಾರಿಗಳ ಸಭೆ ಬುಧವಾರ ಶ್ರೀ ವಿಠಲ್ ಮಂದಿರದಲ್ಲಿ ನಡೆಯಿತು. ಸಭೆಯಲ್ಲಿ ಖ್ಯಾತ ರೈಲ್ವೆ ಮಾರ್ಗ ಹೋರಾಟಗಾರರಾದ ಇಂಜಿನಿಯರ್ ಭೀಮಾಶಂಕರ್ ಪತ್ತಾರ (ಹುಣಸಗಿ) ಅವರು ಭಾಗವಹಿಸಿ ಮುಂದಿನ ಹೋರಾಟದ ರೂಪರೇಷಗಳ ಕುರಿತು ಮಹತ್ವದ ವಿಷಯಗಳನ್ನು ತಿಳಿಸಿ ಮಾರ್ಗದರ್ಶನ ಮಾಡಿದರು.

ಈಗಾಗಲೇ ಕೇಂದ್ರ ಸರ್ಕಾರದಿಂದ



ಜುಲೈ 10ರಂದು ಅಂತಿಮ ಸ್ಥಳ ಸಮೀಕ್ಷೆ ಹಾಗೂ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವ ಪ್ರಕ್ರಿಯೆಗೆ ಚಾಲನೆ ದೊರಕಿದ್ದು ಈ ಕಾರ್ಯವು ಪ್ರಗತಿ ಹಂತದಲ್ಲಿದ್ದು ಇದನ್ನು ಆದಷ್ಟು ಬೇಗ ಮುಕ್ತಾಯಗೊಳಿಸುವಂತಾಗಲು ಮುಂದಿನ ಕಾರ್ಯತಂತ್ರದ ಕು–ರಿತು ಸಭೆಯಲ್ಲಿ ಚರ್ಚಿಸಲಾಯಿತು.

ಈ ಮಹತ್ವದ ಸಭೆಯಲ್ಲಿ ಭಾಗವಹಿಸಿ ತಮ್ಮ ಉಪಯುಕ್ತವಾದ ಸಲಹೆ ಸೂಚನೆಗಳನ್ನು ನೀಡಿದ ಖ್ಯಾತ ರೈಲ್ವೆ ಹೋರಾಟಗಾರರಾದ ಭೀಮಾಶಂಕರ ಪತ್ತಾರ(ಹುಣಸಗಿ) ಇವರನ್ನು ಹೋರಾಟ ಸಮಿತಿಯ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು. ಸಭೆಯಲ್ಲಿ ಹೋರಾಟ ಸಮಿತಿಯ ಅಧ್ಯಕ್ಷರಾದ ಆರ್.ವಿ.ಜಾಲವಾದಿ, ಸಂಚಾಲಕ ಮಹಾಂತೇಶ ಮುರಾಳ, ಪದಾಧಿಕಾರಿಗಳಾದ ಶ್ರೀಕಾಂತ ಪತ್ತಾರ, ಪ್ರಕಾಶ ಹಜೇರಿ, ವಾಸುದೇವ ಹೆಬಸೂರ, ಬಸವರಾಜ ಕುಂಬಾರ, ಜಗದೀಶ ಬಿಳೇಭಾವಿ,ಅಶೋಕ ಚಿನಗುಡಿ, ವಜ್ರಕಾಂತ್ ಪ್ರಥಮಶೆಟ್ಟಿ, ಶ್ರೀನಿವಾಸ ಸೋನಾರ, ಸಿದ್ದು ಬೋಳಶಟ್ಟಿ, ರಾಜು ಸಜ್ಜನ, ರವಿಕಾಂತ ಚಂದುಕರ, ಅಣ್ಣಪ್ಪ ಹುಬ್ಬಳ್ಳಿ, ದತ್ತಾತ್ರೇಯ ಉಭಾಳೆ ಮತ್ತಿತರರು ಇದ್ದರು.

# "ಬರ ಪ್ರದೇಶವೆಂದು ಘೋಷಿಸಿ ರೈತರಿಗೆ 50 ಸಾವಿರ ಪರಿಹಾರಕ್ಕೆ ಬೇಡಿಕೆ"

ನೈಜ್ಯ ದೆಸೆ ನ್ಯೂಸ್

ಸಿರವಾರ: ರಾಜ್ಯದಲ್ಲಿ ಮುಂಗಾರು ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆ ಹಾಗೂ ಸಿರವಾರ ತಾಲ್ಲೂಕು ಸೇರಿದಂತೆ ಬಹುತೇಕ ಪ್ರದೇಶಗಳನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಿಸಿ ರೈತರಿಗೆ ಎಕರೆಗೆ 50 ಸಾವಿರ ಪರಿಹಾರ ನೀಡಬೇಕು ಮತ್ತು ಸಂಪೂರ್ಣ ಕೃಷಿ ಸಾಲ ಮನ್ನಾ ಮಾಡಬೇಕು ಎಂದು ಬಿಜೆಪಿ ರೈತ ಮೋರ್ಚಾದ ತಾಲ್ಲೂಕು ಘಟಕದ ಅಧ್ಯಕ್ಷ ಸುರೇಶ ಗೌಡ ನವಲಕಲ್ ಒತ್ತಾಯಿಸಿದರು.

ಮುಂಗಾರು ಆರಂಭವಾಗಿ



ಎರಡು ತಿಂಗಳು ಕಳೆದಿದ್ದರೂ ಜಿಲ್ಲೆಯಲ್ಲಿ ಮಳೆಯ ಕೊರತೆ ತೀವ್ರವಾಗಿದೆ. ಮಳೆಯ ಅಭಾವದಿಂದ ಹತ್ತಿ, ತೊಗರಿ, ಹೆಸರು, ಭತ್ತ ಸೇರಿದಂತೆ ಪ್ರಮುಖ ಬೆಳೆಗಳು ಸಂಪೂರ್ಣವಾಗಿ ನೆಲಕ್ಕಚ್ಚಿವೆ, ರೈತರು ಕೃಷಿಗೆ ಮಾಡಿದ ಹೂಡಿಕೆಯನ್ನು ಸಂಪೂರ್ಣವಾಗಿ ಕಳೆದುಕೊಂಡು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದಿದ್ದಾರೆ.

ರಾಜ್ಯ ಸರ್ಕಾರ ತಕ್ಷಣವೇ ಕಂದಾಯ ಇಲಾಖೆಯಿಂದ ಬೆಳೆ ಹಾನಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸಬೇಕು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಷ್ಟ್ರೀಯ ವಿಪತ್ತು ನಿಧಿಯಿಂದ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸಬೇಕು ಎಂದು ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

# ಮುದಗಲ್ ಪಟ್ಟಣದಲ್ಲಿ ಕಿಡಿಗೇಡಿಗಳಿಂದ ಶ್ರೀ ವಾಲ್ಮೀಕಿ ವೃತ್ತ ಧ್ವಂಸ,ತೀವ್ರ ಖಂಡನೆ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಕಳೆದ ವಾರ ಮುದಗಲ್ ಪಟ್ಟಣದಲ್ಲಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿಯವರ ವೃತ್ತವನ್ನು ಲಿಂಗಸುಗೂರು ಹಾಗೂ ಮುದಗಲ್ ನಲ್ಲಿ ವಾಲ್ಮೀಕಿ ಸಮಾಜದ ಮುಖಂಡರು,

ಯುವಕರು ನೂತನ ಶ್ರೀ ವಾಲ್ಮೀಕಿ ವೃತ್ತವನ್ನು ಸ್ಥಾಪಿಸಿ ಎಲ್ಲರೊಂದಿಗೆ ಸೇರಿ ಉದ್ಘಾಟನೆ ಮಾಡಲಾಗಿತ್ತು, ಆದರೆ ಮುದಗಲ್ ನಲ್ಲಿ ಯಾರೋ ಕಿಡಿಗೇಡಿಗಳು ಇಂದು ಮುಂಜಾನೆ ನಾಲ್ಕು ಗಂಟೆ ಸಮಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿಂ–ಯವರ ವೃತ್ತವನ್ನು ಕಿತ್ತು ಹಾಕಿದ್ದು ಇದು



ತೀವ್ರ ಖಂಡನೀಯ ವಿಚಾರ ಎಂದು ಮಸ್ಕಿ ತಾಲ್ಲೂಕಿನ ಅಖಿಲ ಕರ್ನಾಟಕ ಶ್ರೀ ವಾಲ್ಮೀಕಿ ಮಹಾಸಭಾ ಅದ್ಯಕ್ಷ ಆರ್ ಕೆ ನಾಯಕ ವಿರೊಧಿಸಿದ್ದಾರೆ.

ಜಗತ್ತಿಗೆ ರಾಮಾಯಣ ಮಹಾಕಾವ್ಯ ಬರೆದಂತಹ ಶ್ರೀ ಮಹರ್ಷಿ ವಾಲ್ಮೀಕಿ ಅವರಿಗೆ ಮಾಡಿದ ಅಪಮಾನ. ಹಾಗೆ ರಾಜ್ಯದ ವಾಲ್ಮೀಕಿ ಜನಾಂಗದ ಸಮುದಾಯಕ್ಕೆ ಅವಮಾನ ಮಾಡಿದಂತಾಗಿದೆ, ಈ ಕೂಡಲೇ ಮಹರ್ಷಿ ವಾಲ್ಮೀಕಿ ಅವರಿಗೆ ಅವಮಾನ ಮಾಡಿದಂತ ಈ ದೃಷ್ಟ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಿ ಕಾನೂನಾತ್ಮಕವಾಗಿ ಉಗ್ರವಾದ ಶಿಕ್ಷೆ ವಿಧಿಸಬೇಕು ಒಂದು ವೇಳೆ ಆಗದೆ ಹೋದರೆ ಜಿಲ್ಲೆಯಾದ್ಯಂತ ಎಲ್ಲಾ ತಾಲೂಕುಗಳಲ್ಲಿ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# "208 ಕಳ್ಳತನ ಪ್ರಕರಣ ಭೇದಿಸಿದ ರಾಯಚೂರು ಪೊಲೀಸರು" 4.02 ಕೋಟಿ ರೂ. ಮೌಲ್ಯದ ಸ್ವತ್ತು ಮಾಲಕರಿಗೆ ಹಸ್ತಾಂತರ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಕಳ್ಳತನ ಪ್ರಕರಣಗಳನ್ನು ಭೇದಿಸಿದ ಪೊಲೀಸರು, ಆರೋಪಿಗಳಿಂದ ವಶಪಡಿಸಿಕೊಂಡ ಸುಮಾರು 4.02 ಕೋಟಿ ರೂ. ಮೌಲ್ಯದ ಸ್ವತ್ತುಗಳನ್ನು ಮೂಲ ಮಾಲಕರಿಗೆ ಹಸ್ತಾಂತರಿಸಿದರು.

2026ರ ಜ.1ರಿಂದ ಜೂ.30ರವರೆಗೆ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ 208 ಪ್ರಕರಣಗಳನ್ನು ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದು, 4,02,61,421ರೂ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡು ಕಾನೂನುಬದ್ಧ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಮಾಲೀಕರಿಗೆ ಹಿಂತಿರುಗಿಸಲಾಗಿದೆ. ದರೋಡೆ, ಸರಗಳ್ಳತನ, ಮನೆ ಕಳ್ಳತನ, ವಾಹನ ಕಳವು ಹಾಗೂ ಜಾನುವಾರು ಕಳವು ಸೇರಿದಂತೆ ವಿವಿಧ ಪ್ರಕರಣಗಳನ್ನು ಪೊಲೀಸರು ಬೇಧಿಸಿದ್ದು,



ಚಿನ್ನಾಭರಣ, ಬೆಳ್ಳಿಯಾಭರಣ, ನಗದು, ನಾಲ್ಕು ಚಕ್ರ ಹಾಗೂ ದ್ವಿಚಕ್ರ ವಾಹನಗಳು, ಲ್ಯಾಪ್‌ಟಾಪ್, ಮೊಬೈಲ್ ಫೋನ್‌ಗಳು, ಕಾಪರ್ ವೈರ್, ಬ್ಯಾಟ–ರಿಗಳು ಸೇರಿದಂತೆ ವಿವಿಧ ಮೌಲ್ಯದ ವಸ್ತುಗಳನ್ನು ಪತ್ತೆಹಚ್ಚಲಾಗಿದೆ.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಬುಧವಾರ ಬಳ್ಳಾರಿ ವಲಯದ ಪೊಲೀಸ್ ಮಹಾನಿರೀಕ್ಷಕ ಡಾ. ಹರ್ಷ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾಯಾಲಯದ ಅನುಮತಿ ಪಡೆದು ಸಂಬಂಧಪಟ್ಟ ದೂರುದಾರರು ಹಾಗೂ ವಾರಸುದಾರರಿಗೆ ಸ್ವತ್ತುಗಳನ್ನು ಹಸ್ತಾಂತ–ರಿಸಲಾಯಿತು.24 ಗಂಟೆಯಲ್ಲೇ ಕಾರು ದರೋಡೆ ಪ್ರಕರಣ ಭೇದನೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಳ್ಳಾರಿ ವಲಯದ ಪೊಲೀಸ್ ಮಹಾನಿರೀಕ್ಷಕ ಡಾ. ಹರ್ಷ ಪಿ.ಎಸ್., ಮಾನ್ವಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ 15.13 ಲಕ್ಷ ರೂ. ಮೌಲ್ಯದ ಕಾರು ದರೋಡೆ ಪ್ರಕರಣವನ್ನು ಕೇವಲ 24 ಗಂಟೆಯೊಳಗೆ ಭೇದಿಸಿ ಐವರು ಆರೋಪಿಗಳನ್ನು ಬಂಧಿಸಿ ಸಂಪೂರ್ಣ ಕಳುವಿನ ಮಾಲನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಯಾಪಲದಿನ್ನಿ, ಮಾನ್ವಿ ಬಳಗಾನೂರು, ಸಿಂಧನೂರು, ಲಿಂಗಸುಗೂರು ಹಾಗೂ ರಾಯಚೂರು ಪಶ್ಚಿಮ ಪೊಲೀಸ್ ಠಾಣೆಗಳ ಅಧಿಕಾರಿಗಳು ಸಿಸಿ ಕ್ಯಾಮೆರಾ ದೃಶ್ಯಾವಳಿ, ಬೆರಳಚ್ಚು, ಟೋಲ್‌ಗೇಟ್ ಮಾಹಿತಿ ಸೇರಿದಂತೆ ಅತ್ಯಾಧುನಿಕ ತಾಂತ್ರಿಕ ತನಿಖೆಯ ನೆರವಿನಿಂದ ಹಲವು ಗಂಭೀರ ಪ್ರಕರಣಗಳನ್ನು ಯಶಸ್ವಿಯಾಗಿ ಪತ್ತೆಹಚ್ಚಿದ್ದಾರೆ ಎಂದರು.

ಸೈಬರ್ ಅಪರಾಧಗಳ ವಿರುದ್ಧವೂ ಪರಿಣಾಮಕಾರಿ ಕಾರ್ಯಾಚರಣೆ ನಡೆಸಲಾಗಿದ್ದು, 42.43 ಲಕ್ಷ ರೂ. ಗೂ ಅಧಿಕ ಹಣವನ್ನು ಸಂತ್ರಸ್ತ–ರಿಗೆ ಮರಳಿಸಲಾಗಿದೆ. ಅಲ್ಲದೆ, ಕೇಂದ್ರ ಸರ್ಕಾರದ ಅಇಖಖ ಪೋರ್ಟಲ್ ಮೂಲಕ ಪತ್ತೆಯಾದ 77 ಕಳೆದುಹೋದ ಮೊಬೈಲ್ ಫೋನ್‌ಗಳನ್ನು ಸಹ ಅವುಗಳ ಮಾಲೀಕರಿಗೆ ಹಸ್ತಾಂತರಿಸಲಾಗಿದೆ. ಅಪರಾಧ ನಿಯಂತ್ರಣ ಹಾಗೂ ಸಾರ್ವಜನಿಕರ ಆಸ್ತಿ ರಕ್ಷಣೆಗೆ ಜಿಲ್ಲಾ ಪೊಲೀಸ್ ಇಲಾಖೆ ಬದ್ಧವಾಗಿದ್ದು, ಮುಂದೆಯೂ ಇದೇ ರೀತಿಯ ಪರಿಣಾಮಕಾರಿ ಕಾರ್ಯಾಚರಣೆ ಮುಂದುವ–ರಿಯಲಿದೆ ಎಂದು ಅವರು ಹೇಳಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕ ಅರುಣಾಂಗ್ಶು ಗಿರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಾಂತವೀರ, ಪಶ್ಚಿಮ ಪೊಲೀಸ್ ಠಾಣೆಯ ಸಿಪಿಐ ಉಮೇಶ್ ಕಾಂಬ್ಳೆ ಪಿಎಸ್‌ಐ ಮಂಜುನಾಥ ಸೇ–ರಿದಂತೆ ವಿವಿದ ಠಾಣೆಯ ಪೊಲೀಸ್ ಅಧಿಕಾ–ರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ಹಕ್ಕಿಯ ಹಾಡು

ಬೆಳಗಿನ ಹೊತ್ತಿನ ಮೊದಲ ಕಿರಣ,
ಹಕ್ಕಿಯ ಹಾಡಿನಲ್ಲಿ ಮೂಡಿತು ಚರಣ.
ಮರದ ಕೊಂಬೆಯಲಿ ಕುಳಿತು ಹಾಡಿ,
ಪ್ರಕೃತಿಯ ಸೌಂದರ್ಯವ ಹರಡಿ.

ಚಿಲಿಪಿಲಿ ಧ್ವನಿಯ ಸಿಹಿ ಸಂಗೀತ,
ಮನದ ನೋವಿಗೆ ನೀಡುವ ಪ್ರೀತಿಯ ಗೀತ.
ಗಾಳಿಯ ಜೊತೆಗೆ ರೆಕ್ಕೆ ಬೀಸಿ,
ಸ್ವಾತಂತ್ರ್ಯದ ಕನಸನು ಹೊತ್ತು ಹಾರಿಸಿ.

ಹೂವಿನ ಪರಿಮಳದ ಜೊತೆಗೂಡಿ,
ಹೊಸ ಆಶೆಯ ದೀಪವ ಬೆಳಗಿ.
ಆಕಾಶವೆಂಬ ಅಂಗಳದಲ್ಲಿ,
ಆನಂದದ ಬಣ್ಣವ ಚೆಲ್ಲಿತು ಎಲ್ಲೆಲ್ಲಿ.

ಹಕ್ಕಿಯ ಹಾಡು ಹೇಳುವ ಪಾಠ,
ಜೀವನದಲ್ಲಿ ಇರಲಿ ನಗು–ನೋಟ.
ಪ್ರತಿ ಬೆಳಗು ಹೊಸ ಆರಂಭವೆಂದು,
ಭರವಸೆಯ ಹಾದಿಯಲಿ ಸಾಗೋಣ ಎಂದೂ.

ಪ್ರಕೃತಿಯ ಮಧುರ ಸಂಗೀತವೇ ನೀನು,
ಮನದೊಳಗೊಂದು ಚೈತನ್ಯದ ಧ್ವನಿಯು ನೀನು.
ಹಕ್ಕಿಯ ಹಾಡು ಕೇಳಿದ ಕ್ಷಣ,
ಬದುಕೇ ಆಗುವುದು ಸುಂದರ ಗಾನ.

# ಮೈಲಾಪುರ ಗ್ರಾಮದಲ್ಲಿ 111ನೇ ಗುರುವಂದನ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.

ನೈಜ್ಯ ದೆಸೆ ನ್ಯೂಸ್

**ಮೈಲಾಪುರ: ಗ್ರಾಮದ ಶರಣ ಸೋಮನಾಳ ದೇವಸ್ಥಾನದಲ್ಲಿ 111ನೇ ಗುರುವಂದನ ಕಾರ್ಯಕ್ರಮವು ಭಕ್ತಿಭಾವ ಮತ್ತು ಶ್ರದ್ಧಾಪೂರ್ವಕ ವಾತಾವರಣದಲ್ಲಿ ಅದ್ದೂರಿಯಾಗಿ ಜರುಗಿತು. ಕಾರ್ಯಕ್ರಮದಲ್ಲಿ ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಶರಣರು, ಭಕ್ತರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗುರುವಂದನೆ ಸಲ್ಲಿಸಿದರು.**



ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಸಿದ್ದೇಶ್ವರ ಸಂಸ್ಥಾನ ಬೂದುಗುಂಪ ಹಾಗೂ ಕಾರಟಗಿಯ ತೆಲಿಕಾನ ಮಠದ ಶರಣರು, ಬೇವಿನಾಳ ಮೈಲಾಪುರ ಹಿರೇಮಠದ ಶ್ರೀ ನಿಜಗುಣಯ್ಯ ಹಿರೇಮಠ, ಚನ್ನಬಸಪ್ಪ ಸುಂಕದ ಹಾಗೂ ಕಾರಟಗಿಯ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗುರುಲಿಂಗಪ್ಪ ಶಿವಶರಣರು ವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಶರಣರು, ಪ್ರತಿಯೊಬ್ಬರ ಜೀವನದಲ್ಲಿ ಗುರುವಿನ ಸ್ಥಾನ ಅತ್ಯಂತ ಮಹತ್ವದ್ದಾಗಿದೆ. ಗುರುವಿನ ಮಾರ್ಗದರ್ಶನದಿಂದ ಜ್ಞಾನ, ಸಂಸ್ಕಾರ, ಶಿಸ್ತು ಹಾಗೂ ಸನ್ಮಾರ್ಗವನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

"ಸಕಲವೂ ಗುರುವಿನಿಂದ" ಎಂಬ ತತ್ವವನ್ನು ವಿವರಿಸಿದ ಅವರು, ಗುರುವಿನಿಂದ ಜೀವನಕ್ಕೆ ಅಗತ್ಯವಾದ ಮೌಲ್ಯಗಳು, ಸತ್ಯ, ಧರ್ಮ, ಸೇವಾ ಮನೋಭಾವ ಹಾಗೂ ಮಾನವೀಯತೆಯನ್ನು ಕಲಿಯಬೇಕು. ಗುರುವಿನ ಉಪದೇಶಗಳನ್ನು ಕೇವಲ ಕೇಳುವುದಷ್ಟೇ ಅಲ್ಲದೆ, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಗುರುವಂದನೆಯ ಉದ್ದೇಶ ಸಾರ್ಥಕವಾಗುತ್ತದೆ ಎಂದು ಹೇಳಿದರು. ಗುರುವಿನ ಕೃಪೆ ಮತ್ತು ಆಶೀರ್ವಾದವು ಸದಾ ಶಿಷ್ಯರ ಮೇಲೆ ಇರಲಿ ಎಂದು ಆಶೀರ್ವದಿಸಿದ ಅವರು, ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸದ್ಭಾವನೆ ನೆಲೆಸಲು ಪ್ರತಿಯೊಬ್ಬರೂ ಗುರುವಿನ ಆದರ್ಶಗಳನ್ನು ಅನುಸರಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಎಪಿಎಂಸಿ ಸದಸ್ಯರಾದ ಕಲ್ಲನಗೌಡ ಮಾಲಿಪಾಟೀಲ್, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ವೀರನಗೌಡ ಮಾಲಿಪಾಟೀಲ್, ಅಮರೇಗೌಡ ಮಾಲಿಪಾಟೀಲ್, ರುದ್ರಗೌಡ ಮಾಲಿಪಾಟೀಲ್, ರಾಜು ಗುಡತಾಳ, ಪಂಪನಗೌಡ, ಶರಣೇಗೌಡ, ಬಸಣ್ಣ ಹಳ್ಳಿ, ತೋಟಯ್ಯ ಶಿಕ್ಷಕರು, ಸಿದ್ದುಸ್ವಾಮಿ ಸೋಮನಾಳ ಸೇರಿದಂತೆ ಗ್ರಾಮದ ಮುಖಂಡರು, ಗುರುಹಿರಿಯರು ಹಾಗೂ ಭಕ್ತರು ಭಾಗವಹಿಸಿದ್ದರು. ಕಾರ್ಯಕ್ರಮವು ಭಕ್ತಿ, ಜ್ಞಾನ ಮತ್ತು ಆಧ್ಯಾತ್ಮಿಕ ಸಂದೇಶಗಳೊಂದಿಗೆ ಯಶಸ್ವಿಯಾಗಿ ನೆರವೇರಿತು.

# ವಿಶ್ವ ಹೆಪಟೈಟಿಸ್ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಮನುಷ್ಯನ ಪ್ರಮುಖ ಅಂಗವಾದ ಯಕೃತ್ (ಲಿವರ್) ಉರಿಯುತಕ್ಕೆ (ಊತ್ ಮತ್ತು ಕೆಂಪಗುವುದು) ಒಳಗಾಗುವ ಒಂದು ಗಂಭೀರ ಕಾಯಿಲೆಯೇ ಹೆಪಟೈಟಿಸ್ ಆಗಿದ್ದು, ಈ ರೋಗದ ಬಗ್ಗೆ ಜಾಗೃತಿ, ಸೋಂಕು ತಡೆಗಟ್ಟುವ ಹಾಗೂ ಚಿಕಿತ್ಸೆಯ ಬಗ್ಗೆ ವೈದ್ಯರು, ಸಿಬ್ಬಂದಿಯವರು ನೀಡುವ ಮಾಹಿತಿಯನ್ನು ಸಾರ್ವಜನಿಕರು ಅನುಸರಿಸಲು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ನಂದಿತಾ ಎಮ್ ಎನ್ ತಿಳಿಸಿದರು.**



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ಸಿಂಧನೂರು ನಗರದ ತಾಲೂಕಾ ಆರೋಗ್ಯಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಂಡ ವಿಶ್ವ ಹೆಪಟೈಟಿಸ್ ಜಾಗೃತಿ ಬಿತ್ತಿಪತ್ರ ಬಿಡುಗಡೆಗೊಳಿಸಿ ಮಾತನಾಡುತ್ತಾ, ಹೆಪಟೈಟಿಸ್ ಕಾಯಿಲೆಯಲ್ಲಿ ಮುಖ್ಯವಾಗಿ ಐದು ವಿಧದ ವೈರಸಗಳಿವೆ. ಹೆಪಟೈಟಿಸ್ ಎ ಮತ್ತು ಇ, ಇವು ಕಲುಷಿತ ನೀರು ಮತ್ತು ಆಹಾರ ಸೇವನೆಯಿಂದ ಹರಡುತ್ತದೆ. ಸೋಂಕು ಹೊಂದಿದವರ ದೈಹಿಕ ದ್ರವಗಳು ಮತ್ತು ಸುರಕ್ಷಿತವಲ್ಲದ ಸೂಜಿಗಳ ಬಳಕೆಯಿಂದ ಹರಡುವ ಸಾಧ್ಯತೆ ಹೆಚ್ಚು. ಇದರಿಂದ ಲಿವರ್ ಕ್ಯಾನ್ಸರ್ ಅಥವಾ ಲಿವರ್ ವೈಫಲ್ಯಕ್ಕೆ ಕಾರಣವಾಗಬಹುದು. ಅಲ್ಲದೆ ಹೆಪಟೈಟಿಸ್ ಬಿ ಮತ್ತು ಸಿ ಯ ಆರಂಭಿಕ ಹಂತದಲ್ಲಿ ಯಾವುದೇ ರೋಗ ಲಕ್ಷಣಗಳಿಲ್ಲದಿದ್ದಾಗ ಪರಿಸ್ಥಿತಿಯು ಆತಂಕಕಾರಿಯಾಗುತ್ತದೆ ಆದರೆ ನಂತರ ಯಕೃತ್ತಿನ ವೈಫಲ್ಯಕ್ಕೆ ಕಾರಣವಾಗುತ್ತದೆ ಎಂದರು.

ಸಾಮಾನ್ಯವಾಗಿ ಅತಿಯಾದ ಆಯಾಸ ಮತ್ತು ದೌರ್ಬಲ್ಯ ಚರ್ಮ ಮತ್ತು ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುವುದು, ಗಾಢ ಹಳದಿ ಬಣ್ಣದ ಮೂತ್ರ ವಿಸರ್ಜನೆ, ಹೊಟ್ಟೆ ನೋವು ಮತ್ತು ವಾಕರಿಕೆ ವಾಂತಿ, ಹಸಿವಾಗದಿರುವುದು ಮತ್ತು ತೂಕ ನಷ್ಟ ಇವು ಲಕ್ಷಣಗಳಾಗಿವೆ.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ ಯಶೋಧಾ ಮಾತನಾಡಿ, ಸ್ವಚ್ಛತೆ, ಸುರಕ್ಷಿತ ಹಾಗೂ ಶುದ್ಧವಾದ ಕುಡಿಯುವ ನೀರು ಮತ್ತು ಆಹಾರವನ್ನು ಬಳಕೆ, ರಕ್ತ ಪೂರಣ ಮಾಡುವಾಗ ಜಾಗ್ರತೆ, ಒಬ್ಬರು ಬಳಸಿದ ಸೂಜಿಯನ್ನು ಮತ್ತೊಬ್ಬರು ಬಳಸಬಾರದು, ಅಲ್ಲದೆ ಮುನ್ನೆಚ್ಚರಿಕೆ ಕ್ರಮವಾಗಿ, ಹೆಪಟೈಟಿಸ್ ಬಿ ಲಸಿಕೆಯು ಅತ್ಯಂತ ಪರಿಣಾಮಕಾರಿಯಾಗಿದೆ ಎಂದರು.

ಇದೆ ವೇಳೆ ಮೋಬೈಲೆಷನ್ ಫಾರ್ ಏಡ್ಸ್ ಸುರಕ್ಷಾ ಅಭಿಯಾನದ ಕುರಿತು ಜಾಗೃತಿಯ ಭಿತ್ತಿಪತ್ರ ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಎನ್‌ವಿಬಿಡಿಸಿಪಿ ಅಧಿಕಾರಿ ಡಾ ಚಂದ್ರಶೇಖರಯ್ಯ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ ಶಿವಕುಮಾರ್ ನಾರಾ, ಟಿಹೆಚ್‌ಓ ಡಾ ಅಯ್ಯನಗೌಡ, ಸಿಎಮ್‌ಓ ಡಾ ಸುರೇಶ ಗೌಡ, ಎಮ್‌ಸಿಹೆಚ್ ಸಿಎಮ್‌ಓ ಡಾ ಕಾವೇರಿ, ಡಿಹೆಚ್‌ಇಓ ಈಶ್ವರ ದಾಸಪ್ಪನವರ, ಜಿಲ್ಲಾ ಮಟ್ಟದ ನವೀನ್ ಕುಮಾರ್, ಮಲ್ಲಯ್ಯ ಮಠಮಠಿ, ಅಮರೇಶ್, ಶ್ರೀನಿವಾಸ್, ಸೂಗುರಪ್ಪ, ಹಾಗೂ ರಂಗನಾಥ್ ಗುಡಿ, ಸಂಗನಗೌಡ ಪಾಟೀಲ್, ಗೀತಾ ಹೀರೆಮಠ, ತ್ರಿವೇಣಿ, ರಾಘವೇಂದ್ರ, ಎಫ್‌ಎ ಹಣಗಿ, ಸೇರಿದಂತೆ ಎಲ್ಲಾ ನಗರ, ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರಗಳ ಆಡಳಿತ ವೈದ್ಯಾಕಾರಿಗಳು, ಆಯುಷ್ ವೈದ್ಯಾಧಿಕಾರಿಗಳು, ಆರ್‌ಬಿಎಸ್‌ಕೆ ವೈದ್ಯರು, ಹಿರಿಯ ಪಿಹೆಚ್‌ಸಿಓ ಹಾಗೂ ಸೀನಿಯರ್ ಹೆಚ್‌ಐಓ ರವರು ಭಾಗವಹಿಸಿದ್ದರು.

**PUBLIC NOTICE**
**Revocation of Power of Attorney**

Notice is hereby given to the general public that I, **Smt. Shabana D/o Sultansab Kadu** aged about 39 years, Occupation: Teacher, residing at, Near Ambedkar Circle Talikot Dist: Vijayapur, **was one of the executants of a Power of Attorney dated 17/03/2012** executed in favour of **Sri.** Sultansab Kadu R/o Bidarkundi Tq:Muddebihal, which was notarized before the Notary Public at Muddebihal.

I hereby declare that I have **revoked and cancelled the said Power of Attorney only insofar as it relates to my right, title, interest and defined share** in the immovable property described below by executing a **Deed of Partial Revocation of Power of Attorney dated 17/03/2012.**

Accordingly, **Sri.** Sultansab Kadu R/o Bidarkundi Tq:Muddebihal has **no authority whatsoever** to represent me or to sell, transfer, mortgage, lease, gift, develop, execute any document, receive consideration, or otherwise deal with **my share and interest** in the property described below.

**Any person dealing with the said Attorney** in respect of **my share and interest in the property** shall do so **entirely at his/her own risk, cost and consequences**, and I shall not be bound by any such act or transaction.

**Schedule of Property**

| Sy. No | Area A-G | Assessment Rs-Ps | Village |
|---|---|---|---|
| 116/*/1 | 05-38 | 09-94 | Mukihal |

Date: 28/07/2026
Place: Talikot

Smt. Shabana D/o Sultansab Kadu
(Revoking Principal)

1ನೇ ಪುಟದಿಂದ....

ಹೂಡಿಕೆ ಮಾಡುತ್ತಿರುವುದರಿಂದ ಹೊರಹರಿವು ಕೂಡ ಹೆಚ್ಚಾಗಿದೆ ಎಂದು ವಿವರಿಸಿದೆ. ವಿದೇಶಗಳಲ್ಲಿ ಭಾರತೀಯ ಕಂಪನಿಗಳ ಹೂಡಿಕೆ ಹೆಚ್ಚುತ್ತಿರುವುದು ಜಾಗತಿಕ ಮಟ್ಟದಲ್ಲಿ ವ್ಯವಹಾರ ವಿಸ್ತರಣೆ ಹಾಗೂ ಸ್ಪರ್ಧಾತಕ ಸಾಮರ್ಥ್ಯವನ್ನು ಬಲಪಡಿಸುವಲ್ಲಿ ಸಹಕಾರಿಯಾಗಿದ್ದು, ಇದು ದೀರ್ಘಾವಧಿಯಲ್ಲಿ ಭಾರತೀಯ ಆರ್ಥಿಕತೆಗೆ ಅನುಕೂಲಕರವಾಗಲಿದೆ ಎಂದು ಕೇಂದ್ರ ಸರ್ಕಾರ ಅಭಿಪ್ರಾಯಪಟ್ಟಿದೆ. ಇದಲ್ಲದೆ, ವಿದೇಶಿ ಹೂಡಿಕೆದಾರರು ಹೂಡಿಕೆ ಹಿಂಪಡೆಯುವ ಪ್ರಮಾಣ ಹೆಚ್ಚಾಗಿರುವುದು ಭಾರತದಲ್ಲಿ ಅವರು ಉತ್ತಮ ಲಾಭ ಗಳಿಸಿರುವುದನ್ನು ಸೂಚಿಸುತ್ತಿದ್ದು, ಭಾರತ ವಿಶ್ವಾಸಾರ್ಹ ಹೂಡಿಕೆ ತಾಣವಾಗಿರುವುದಕ್ಕೂ ಇದು ಸಾಕ್ಷಿಯಾಗಿದೆ ಎಂದು ಸರ್ಕಾರ ತನ್ನ ಉತ್ತರದಲ್ಲಿ ತಿಳಿಸಿದೆ. ರಾಜ್ಯಗಳ ಪೈಕಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ದ್ವಿತೀಯ ಸ್ಥಾನದಲ್ಲಿದೆ. ನಂತರ ಗುಜರಾತ್, ದೆಹಲಿ, ತಮಿಳುನಾಡು, ಹರಿಯಾಣ, ತೆಲಂಗಾಣ, ರಾಜಸ್ಥಾನ, ಉತ್ತರ ಪ್ರದೇಶ, ಜಾರ್ಖಂಡ್, ಪಶ್ಚಿಮ ಬಂಗಾಳ, ಕೇರಳ, ಆಂದ್ರಪ್ರದೇಶ, ಪಂಜಾಬ್, ಮಧ್ಯಪ್ರದೇಶ ರಾಜ್ಯಗಳು ಕ್ರಮಾಂಕದಲ್ಲಿ ವಿದೇಶಿಯ ಹೂಡಿಕೆಯನ್ನು ಆಕರ್ಷಿಸಿವೆ. ಸೇವಾವಲಯ ಕಂಪ್ಯೂಟರ್ ಸಾಫ್ಟವೇರ್ ಮತ್ತು ಹಾರ್ಡ್‌ವೇರ್, ರೇಡಿಂಗ್, ಆಟೋಮೊಬೈಲ್, ಟೆಲಿ ಕಮ್ಯೂನಿಕೇಷನ್, ನಿರ್ಮಾಣ, ಔಷಧಿ, ಇಂಧನ, ಹೋಟೆಲ್ ಟೂರಿಸಂ, ಆಹಾರ ಸಂಸ್ಕರಣೆ ಸೇರಿದಂತೆ ಕೆಲವು ವಲಯಗಳಲ್ಲಿ ಹೂಡಿಕೆ ಹೆಚ್ಚಾಗಿವೆ ಎಂದು ವಿವರಿಸಲಾಗಿದೆ.

# ವಿದ್ಯಾರ್ಥಿಗಳ ಮೇಲಿನ ಅಮಾನವೀಯ ದೌರ್ಜನ್ಯ ಖಂಡಿಸಿ ಸಂಸತ್ ಮಕರ ದ್ವಾರದಲ್ಲಿ ವಿಪಕ್ಷ ಸಂಸದರ ಪ್ರತಿಭಟನೆ– ರಾಯಚೂರು ಸಂಸದ ಜಿ. ಕುಮಾರ್ ನಾಯಕ್ ಭಾಗಿ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ವಿದ್ಯಾರ್ಥಿಗಳ ಮೇಲಿನ ಅಮಾನವೀಯ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿ, ಘಟನೆಯ ಕುರಿತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಗೃಹ ಸಚಿವರು ಉತ್ತರದಾಯಿತ್ವ ವಹಿಸಬೇಕು ಎಂದು ಒತ್ತಾಯಿಸಿ ಸಂಸತ್ತಿನ ಮಕರ ದ್ವಾರದ ಬಳಿ ವಿಪಕ್ಷ ಸಂಸದರು ನಡೆಸಿದ ಪ್ರತಿಭಟನೆಯಲ್ಲಿ ರಾಯಚೂರು ಲೋಕಸಭಾ ಕ್ಷೇತ್ರದ ಸಂಸದರಾದ ಜಿ. ಕುಮಾರ್ ನಾಯಕ್ ಅವರು ಭಾಗವಹಿಸಿದರು.**




ವಿದ್ಯಾರ್ಥಿಗಳ ಹಕ್ಕುಗಳು, ಸುರಕ್ಷತೆ ಹಾಗೂ ಪ್ರಜಾಸತ್ತಾತ್ಮಕವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ರಕ್ಷಿಸಬೇಕು ಎಂದು ಪ್ರತಿಭಟನಾನಿರತ ಸಂಸದರು ಆಗ್ರಹಿಸಿದರು. ವಿದ್ಯಾರ್ಥಿಗಳ ವಿರುದ್ಧ ನಡೆದಿರುವ ಅಮಾನವೀಯ ವರ್ತನೆ ಮತ್ತು ದೌರ್ಜನ್ಯದ ಕುರಿತು ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಬೇಕು ಹಾಗೂ ಘಟನೆಗೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ವಿದ್ಯಾರ್ಥಿಗಳ ಧ್ವನಿಯನ್ನು ಹತ್ತಿಕ್ಕುವ ಬದಲು ಅವರ ಸಮಸ್ಯೆಗಳು ಮತ್ತು ನ್ಯಾಯಸಮ್ಮತ ಬೇಡಿಕೆಗಳನ್ನು ಆಲಿಸಿ, ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನಬದ್ಧ ರೀತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕು ಎಂದು ಸಂಸದರು ಪ್ರತಿಪಾದಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ ರಾಯಚೂರು ಸಂಸದ ಜಿ. ಕುಮಾರ್ ನಾಯಕ್ ಅವರು, ವಿದ್ಯಾರ್ಥಿಗಳ ಹಕ್ಕುಗಳ ರಕ್ಷಣೆ ಹಾಗೂ ಅವರ ನ್ಯಾಯಸಮ್ಮತ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ಮೇಲಿನ ಯಾವುದೇ ರೀತಿಯ ದೌರ್ಜನ್ಯವನ್ನು ಸಹಿಸಲು ಸಾಧ್ಯವಿಲ್ಲ. ಘಟನೆಯ ಕುರಿತು ಸಮಗ್ರ ತನಿಖೆ ನಡೆಸಿ, ಸತ್ಯಾಂಶವನ್ನು ಸಾರ್ವಜನಿಕರ ಮುಂದೆ ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು. ವಿದ್ಯಾರ್ಥಿಗಳ ಭವಿಷ್ಯ ಮತ್ತು ಅವರ ಹಕ್ಕುಗಳ ರಕ್ಷಣೆ ಸರ್ಕಾರದ ಪ್ರಮುಖ ಜವಾಬ್ದಾರಿಯಾಗಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರವು ಗಂಭೀರವಾಗಿ ಸ್ಪಂದಿಸಿ, ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

# ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಸಮಗ್ರ ಕಾರ್ಯಯೋಜನೆ ರೂಪಿಸಿ ಅನುಷ್ಠಾನಗೊಳಿಸಿ: ಜಿಲ್ಲಾಧಿಕಾರಿ ಪೂವಿತಾ ಎಸ್.

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶವನ್ನು ಇನ್ನಷ್ಟು ಉತ್ತಮಗೊಳಿಸಿ, ರಾಜ್ಯ ಮಟ್ಟದಲ್ಲಿ ಜಿಲ್ಲೆಯನ್ನು ಅಗ್ರಸ್ಥಾನಕ್ಕೇರಿಸುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ಎಲ್ಲ ಹಂತದ ಅಧಿಕಾರಿಗಳು, ಶಾಲಾ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ಜವಾಬ್ದಾರಿಯುತವಾಗಿ, ಸಮನ್ವಯದಿಂದ ಮತ್ತು ಗುರಿನಿರ್ದಿಷ್ಟವಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಶ್ರೀಮತಿ ಪೂವಿತಾ ಎಸ್. ಅವರು ಸೂಚಿಸಿದರು.**



ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ 2026?27ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಆಯೋಜಿಸಿದ್ದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕಳೆದ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದು, ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಈ ಫಲಿತಾಂಶವನ್ನು ಇನ್ನಷ್ಟು ಉತ್ತಮಗೊಳಿಸಲು ಆರಂಭದಿಂದಲೇ ಸೂಕ್ತ ಯೋಜನೆ ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಶೈಕ್ಷಣಿಕ ವರ್ಷದ ಆರಂಭಿಕ ಹಂತದಲ್ಲಿಯೇ ಗುರುತಿಸಿ, ಅವರಿಗೆ ವಿಶೇಷ ಶೈಕ್ಷಣಿಕ ಮಾರ್ಗದರ್ಶನ, ಹೆಚ್ಚುವರಿ ಬೋಧನೆ ಹಾಗೂ ನಿರಂತರ ಮೇಲ್ವಿಚಾರಣೆ ಒದಗಿಸಬೇಕು. ವಿದ್ಯಾರ್ಥಿಗಳ ಕಲಿಕಾ ಕೊರತೆಗಳನ್ನು ಗುರುತಿಸಿ, ಅವುಗಳನ್ನು ನಿವಾರಿಸಲು ವಿಷಯವಾರು ಮತ್ತು ವಿದ್ಯಾರ್ಥಿವಾರು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು. ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ, ಆಸಕ್ತಿ, ಗ್ರಹಿಕೆ ಹಾಗೂ ಮಾನಸಿಕ ಸ್ಥಿತಿಯನ್ನು ಪರಿಗಣಿಸಿ ಪರಿಣಾಮಕಾರಿ ಮತ್ತು ವಿದ್ಯಾರ್ಥಿ ಸ್ನೇಹಿ ಬೋಧನಾ ವಿಧಾನಗಳನ್ನು ಅಳವಡಿಸಬೇಕು. ಶಿಕ್ಷಕರು ಪೂರ್ವಸಿದ್ಧತೆಯೊಂದಿಗೆ ತರಗತಿಗಳಿಗೆ ಹಾಜರಾಗಿ, ಬೋಧನೆಯನ್ನು ಹೆಚ್ಚು ಆಸಕ್ತಿದಾಯಕ, ಪರಿಣಾಮಕಾರಿ ಹಾಗೂ ಫಲಿತಾಂಶಾಧಾರಿತವಾಗಿ ರೂಪಿಸಬೇಕು ಎಂದು ಹೇಳಿದರು.

ಪಠ್ಯಕ್ರಮವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದರೊಂದಿಗೆ, ಪುನರಾವರ್ತನೆ, ಘಟಕ ಪರೀಕ್ಷೆಗಳು, ಮಾದರಿ ಪರೀಕ್ಷೆಗಳು ಹಾಗೂ ಪ್ರಶ್ನೆಪತ್ರಿಕೆಗಳ ಅಭ್ಯಾಸಕ್ಕೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡಿ, ಅಗತ್ಯವಿರುವ ಕಡೆ ತಕ್ಷಣವೇ ಪರಿಹಾರಾತ್ಮಕ ಬೋಧನಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು. ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಬಿಆರ್‌ಸಿ, ಬಿಆರ್‌ಪಿ, ಸಿಆರ್‌ಪಿ ಹಾಗೂ ಸಂಬಂಧಿತ ಶಿಕ್ಷಣ ಇಲಾಖೆಯ ಅಧಿಕಾರಿಗಳು ನಿಯಮಿತವಾಗಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಶಾಲೆಗಳಲ್ಲಿನ ಬೋಧನಾ ಪ್ರಕ್ರಿಯೆ, ಶಿಕ್ಷಕರ ಕಾರ್ಯನಿರ್ವಹಣೆ, ವಿದ್ಯಾರ್ಥಿಗಳ ಹಾಜರಾತಿ, ಕಲಿಕಾ ಪ್ರಗತಿ ಹಾಗೂ ಶೈಕ್ಷಣಿಕ ಫಲಿತಾಂಶಗಳ ಕುರಿತು ನಿರಂತರ ಮೇಲ್ವಿಚಾರಣೆ ವಹಿಸಬೇಕು ಎಂದು ತಿಳಿಸಿದರು.

ಮಧ್ಯಾಹ್ನ ಉಪಹಾರ ಯೋಜನೆ, ಹಾಲು ಪೂರೈಕೆ, ಶಾಲಾ ಬಜೆಟ್ ಹಾಗೂ ಇತರೆ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತ್ವರಿತವಾಗಿ ಗುರುತಿಸಿ ಪರಿಹರಿಸಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸಂಬಂಧಿತ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. ಶಾಲಾ ಸಾರಿಗೆ ಸೌಲಭ್ಯವಿಲ್ಲದ ಕಾರಣ ದೂರದ ಪ್ರದೇಶಗಳಿಂದ ವಿದ್ಯಾರ್ಥಿಗಳು ನಡೆದುಕೊಂಡು ಶಾಲೆಗೆ ಆಗಮಿಸುತ್ತಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಇಂತಹ ಪ್ರದೇಶಗಳನ್ನು ಗುರುತಿಸಿ, ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ವಿದ್ಯಾರ್ಥಿಗಳ ಸುರಕ್ಷಿತ ಹಾಗೂ ಸುಲಭ ಸಂಚಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಸಭೆಯಲ್ಲಿ ಕಳೆದ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದ ಕುರಿತು ಸಮಗ್ರ ವಿಶ್ಲೇಷಣೆ ನಡೆಸಲಾಯಿತು. ವಿಷಯವಾರು, ಶಾಲಾವಾರು ಹಾಗೂ ವಿದ್ಯಾರ್ಥಿವಾರು ಫಲಿತಾಂಶಗಳನ್ನು ಪರಿಶೀಲಿಸಿ, ಉತ್ತಮ ಸಾಧನೆ ಮಾಡಿದ ಶಾಲೆಗಳ ಪರಿಣಾಮಕಾರಿ ಕ್ರಮಗಳನ್ನು ಇತರೆ ಶಾಲೆಗಳಲ್ಲಿಯೂ ಅಳವಡಿಸುವ ಕುರಿತು ಚರ್ಚಿಸಲಾಯಿತು. ಕಡಿಮೆ ಫಲಿತಾಂಶ ದಾಖಲಾದ ಶಾಲೆಗಳನ್ನು ವಿಶೇಷವಾಗಿ ಗುರುತಿಸಿ, ಅಲ್ಲಿನ ಶೈಕ್ಷಣಿಕ ಸವಾಲುಗಳಿಗೆ ಪರಿಹಾರ ಕಂಡುಹಿಡಿಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಪ್ರತಿಯೊಂದು ಶಾಲೆಯೂ ಸ್ಪಷ್ಟ ಗುರಿಯನ್ನು ಹೊಂದಿ ಕಾರ್ಯನಿರ್ವಹಿಸುವ ಮೂಲಕ ಜಿಲ್ಲೆಯ ಒಟ್ಟಾರೆ ಫಲಿತಾಂಶವನ್ನು ಸುಧಾರಿಸಲು ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಣೆಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ಶಾಲಾ ಆಡಳಿತ ಮಂಡಳಿಗಳು, ಪೋಷಕರು ಹಾಗೂ ವಿದ್ಯಾರ್ಥಿಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು. ನಿರಂತರ ಪರಿಶ್ರಮ, ಪರಿಣಾಮಕಾರಿ ಮೇಲ್ವಿಚಾರಣೆ ಹಾಗೂ ಸಮಗ್ರ ಕಾರ್ಯಯೋಜನೆಯ ಮೂಲಕ ರಾಯಚೂರು ಜಿಲ್ಲೆಯನ್ನು ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಅಗ್ರಸ್ಥಾನಕ್ಕೇರಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಶ್ರೀಮತಿ ಪೂವಿತಾ ಎಸ್. ಅವರು ಹೇಳಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಶಿಕ್ಷಣ ಇಲಾಖೆಯ ಮತ್ತು ಸಂಬಂಧಿತ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**ರಾಮನಗರ ಜಿಲ್ಲಾ ನ್ಯಾಯಾಲಯ ನೇಮಕಾತಿ 2026 ? 55 ಬೆರಳಚ್ಚುಗಾರ (Typist) ಮತ್ತು ಸೇವಕ (Servant) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 30 ಜುಲೈ 2026**

ರಾಮನಗರ ಜಿಲ್ಲಾ ನ್ಯಾಯಾಲಯ ನೇಮಕಾತಿ 2026: 55 ಬೆರಳಚ್ಚುಗಾರ ಮತ್ತು ಸೇವಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಮನಗರ ಜಿಲ್ಲಾ ನ್ಯಾಯಾಲಯವು ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಬೆರಳಚ್ಚುಗಾರ ಮತ್ತು ಸೇವಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದ ಅಡಿಯಲ್ಲಿ ರಾಮನಗರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 31-ಆಗಸ್ಟ್-2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: ramanagara.dcourts.gov.in

### ಜಾಲಹಳ್ಳಿಯಲ್ಲಿ ವಿದ್ಯುತ್ ಸ್ಪರ್ಶದಿಂದ ಶಿವು ತಂದೆ ಅಯ್ಯಪ್ಪ ಯುವಕ ಸ್ಥಳದಲ್ಲೇ ಸಾವು ಪಂಪ್‌ಸೆಟ್ ಆನ್ ಮಾಡುವ ವೇಳೆ ಸಂಭವಿಸಿದ ದಾರುಣ ದುರ್ಘಟನೆ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಪಂಪ್‌ಸೆಟ್ ಆನ್ ಮಾಡುವ ವೇಳೆ ವಿದ್ಯುತ್ ಸ್ಪರ್ಶಿಸಿ 18 ವರ್ಷದ ಯುವಕ ಸ್ಥಳದಲ್ಲೇ ಮೃತಪಟ್ಟಿರುವ ದಾರುಣ ಘಟನೆ ಗುರುವಾರ ಬೆಳಗಿನ ಜಾವ ನಡೆದಿದೆ.**



ಮೃತರನ್ನು ಶಿವು ತಂದೆ ಅಯ್ಯಪ್ಪ ಕರಡಿ (18) ಎಂದು ಗುರುತಿಸಲಾಗಿದೆ. ತೋಟಕ್ಕೆ ನೀರು ಹಾಯಿಸಲು ತೆರಳಿದ್ದ ಶಿವು ಪಂಪ್‌ಸೆಟ್ ಚಾಲನೆ ಮಾಡಲು ಮುಂದಾದಾಗ ಆಕಸ್ಮಿಕವಾಗಿ ವಿದ್ಯುತ್ ಪ್ರವಹಿಸಿ ತೀವ್ರ ಶಾಕ್‌ಗೆ ಒಳಗಾದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಘಟನೆಯಿಂದ ಕುಟುಂಬಸ್ಥರು ಹಾಗೂ ಗ್ರಾಮಸ್ಥರಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ. ಸಾರ್ವಜನಿಕರುಸರ್ಕಾರದಿಂದಪ-ರಿಹಾರಕ್ಕೆಒತ್ತಾಯಿಸಿದ್ದಾರೆ. ಮಾಹಿತಿ ತಿಳಿದು ಜಾಲಹಳ್ಳಿ ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಸಂಬಂಧ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿದ್ಯುತ್ ಸ್ಪರ್ಶಕ್ಕೆ ನಿಖರ ಕಾರಣವೇನು ಎಂಬುದರ ಕುರಿತು ತನಿಖೆ ಮುಂದುವರಿದಿದೆ.

### ಚಿರತೆ ದಾಳಿಗೆ ಮೇಕೆ ಬಲಿ ಭಯದ ವಾತಾವರಣದಲ್ಲಿ ಮಲ್ಲಿನಾಯಕ ದೊಡ್ಡಿ ಗ್ರಾಮಸ್ಥರು

❑ ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಮಲ್ಲಿನಾಯಕನ ದೊಡ್ಡಿ ಗ್ರಾಮದಲ್ಲಿ ತಡ ರಾತ್ರಿ ಚಿರತೆ ದಾಳಿ ಮಾಡಿ ಮೇಕೆಯನ್ನು ಬಲಿ ಪಡಿದುಕೊಂಡ ಘಟನೆ ಜರುಗಿದ್ದರಿಂದ ಗ್ರಾಮಸ್ಥರಲ್ಲಿ ಭಯದ ವಾತವರಣ ಸೃಷ್ಟಿಯಾಗಿದೆ.**



ಕಳೆದ ತಿಂಗಳಿನಿಂದ ಬಿ.ಗಣೇಕಲ್ ಕೊತ್ತದೊಡ್ಡಿ ಇನ್ನಿತರ ಗ್ರಾಮಗಳಲ್ಲಿ ಸಾಕು ಪ್ರಾಣಿಗಳಾದ ಹಸು ಮತ್ತು ಮೇಕೆ ಮೇಲೆ ದಾಳಿ ಮಾಡಿ ಪ್ರಾಣ ಹಾನಿ ಉಂಟು ಮಾಡಿತ್ತು ಅದಲ್ಲದೆ ವಾರದ ಹಿಂದಿ ನಗರಗುಂಡ ಗ್ರಾಮದ ಬೆಟ್ಟದಲ್ಲಿ ಚಿರತೆ ಪ್ರತ್ಯಕ್ಷವಾದ ವಿಡಿಯೋ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ಘಟನೆಯಿಂದ ಮಲ್ಲಿನಾಯಕ ದೊಡ್ಡಿ ಗ್ರಾಮದ ಜನರಲ್ಲಿ ಚಿರತೆ ಬಗ್ಗೆ ಸಾಕಷ್ಟು ಭಯ ಹುಟ್ಟಿದ್ದು ಹಗಲೊತ್ತಿನಲ್ಲಿ ಆಡು ಕುರಿಗಾಹಿಗಳು ಬೆಟ್ಟಗುಡ್ಡಗಳ ಕಡೆ ಮೇಯಿಸಲು ಹೋಗಲು ಹಿಂಜೆರಿಯುತ್ತಿದ್ದಾರೆ ಅದರಲ್ಲೂ ಮಲ್ಲಿನಾಯಕ ದೊಡ್ಡಿ ಗ್ರಾಮದ ಜನರ ಕೃಷಿಯನ್ನೆ ಅವಲಂಬನೆ ಮಾಡಿ ಬದುಕುವ ರೈತರು ತಮ್ಮ ಹೊಲಕ್ಕೆ ಹೋಗಲು ಭಯ ಪಡುವ ಪರಿಸ್ಥಿತಿ ಉಂಟಾಗಿದೆ, ತಾಲೂಕಿನಲ್ಲಿ ಮೇಲಿಂದ ಮೇಲೆ ಚಿರತೆ ಪ್ರತ್ಯಕ್ಷವಾಗಿ ಪ್ರಾಣಿಗಳ ಮೇಲೆ ದಾಳಿ ಮಾಡಿ ಪ್ರಾಣ ಹಾನಿ ಮಾಡಿದರು ಅರಣ್ಯ ಇಲಾಖೆ ಮಾತ್ರ ಕೈ ಕಟ್ಟಿಕೊಂಡು ಕುಳಿತಿರುವುದು ವಿಪರ್ಯಾಸದ ಸಂಗತಿ ಇಷ್ಟೆಲ್ಲಾ ದುರ್ಘಟನೆಗಳು ಸಂಭವಿಸಿದರು ಮುಂದಿನ ದಿನಗಳಲ್ಲಿ ಅರಣ್ಯ ಇಲಾಖೆ ಚಿರತೆಯನ್ನು ಬಂದಿಸಿ ಮುಂದಿನ ದಿನಮಾನಗಳಲ್ಲಿ ಇಂತಹ ಘಟನೆಗಳನ್ನ ಮರುಕಳಿಸದಂತೆ ಕಾಳಜಿ ವಹಿಸಿ ಅರಣ್ಯ ಇಲಾಖೆಯವರು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದು ಮಲ್ಲಿನಾಯಕ ದೊಡ್ಡಿ ಗ್ರಾಮಸ್ಥರ ಒತ್ತಾಯವಾಗಿದೆ.

# ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಅಪರಾಧ ಪರಿಶೀಲನಾ ಸಭೆ

## ಕಾನೂನು ಸುವ್ಯವಸ್ಥೆ, ಮಾದಕ ವಸ್ತುಗಳ ನಿಯಂತ್ರಣ ಹಾಗೂ ತನಿಖಾ ಪ್ರಕರಣಗಳ ತ್ವರಿತ ವಿಲೇವಾರಿಗೆ ಸೂಚನೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲಾ ಪೊಲೀಸ್ ಕಚೇ-ರಿಯಲ್ಲಿ ಮಾನ್ಯ ಪೊಲೀಸ್ ಮಹಾನಿ-ರೀಕ್ಷಕರು, ಬಳ್ಳಾರಿ ವಲಯ ಅವರು ಜಿಲ್ಲೆಯ ಪೊಲೀಸ್ ಅಧಿಕಾರಿಗಳೊಂದಿಗೆ ಅಪರಾಧ ಪರಿಶೀಲನಾ ಸಭೆಯನ್ನು ನಡೆಸಿದರು.**



ಸಭೆಯಲ್ಲಿ ಜಿಲ್ಲೆಯ ಪ್ರಸ್ತುತ ಕಾನೂನು ಮತ್ತು ಸುವ್ಯವಸ್ಥೆಯ ಸ್ಥಿತಿಗತಿ, ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಅಪರಾಧ ಪ್ರಕರಣಗಳು, ತನಿಖಾ ಹಂತದಲ್ಲಿರುವ ಪ್ರಕರಣಗಳ ಪ್ರಗತಿ, ಬಾಕಿ ಉಳಿದಿರುವ ಪ್ರಕರಣಗಳ ಶೀಘ್ರ ವಿಲೇವಾರಿ ಹಾಗೂ ಸಾರ್ವಜನಿಕರ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳ ಕು-ರಿತು ಸಮಗ್ರವಾಗಿ ಪರಿಶೀಲನೆ ನಡೆಸಲಾಯಿತು. ಮಾದಕ ವಸ್ತುಗಳ ಅಕ್ರಮ ಸಾಗಣೆ, ಮಾರಾಟ ಹಾಗೂ ಬಳಕೆಯನ್ನು ಪರಿಣಾಮಕಾ-ರಿಯಾಗಿ ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸ್ ಅಧಿಕಾರಿಗಳು ಹೆಚ್ಚಿನ ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಮಾನ್ಯ ಪೊಲೀಸ್ ಮಹಾನಿರೀಕ್ಷಕರು ಸೂಚಿಸಿದರು. ಮಾದಕ ವಸ್ತುಗಳ ಜಾಲದಲ್ಲಿ ತೊಡಗಿರುವ ವ್ಯಕ್ತಿಗಳು ಮತ್ತು ಸಂಘಟಿತ ಜಾಲಗಳ ವಿರುದ್ಧ ಕಾನೂನುಬದ್ಧವಾಗಿ ಕಠಿಣ ಕ್ರಮ ಕೈಗೊಳ್ಳಬೇಕು.

ಶಾಲಾ-ಕಾಲೇಜುಗಳ ಸುತ್ತಮುತ್ತ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಬಳಕೆಯನ್ನು ತಡೆಯಲು ನಿರಂತರ ನಿಗಾ ವಹಿಸಬೇಕು ಎಂದು ನಿರ್ದೇಶನ ನೀಡಿದರು. ತನಿಖಾ ಹಂತದಲ್ಲಿರುವ ಪ್ರಕರಣಗಳಲ್ಲಿ ಸಾಕ್ಷ್ಯಾಧಾರಗಳನ್ನು ಸಮರ್ಪಕವಾಗಿ ಸಂಗ್ರಹಿಸಿ, ವೈಜ್ಞಾನಿಕ ಮತ್ತು ತಾಂತ್ರಿಕ ವಿಧಾನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ತನಿಖೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸಲಹೆ ನೀಡಲಾಯಿತು. ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳಿಗೆ ಆದ್ಯತೆ ನೀಡಿ, ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು ಪ್ರಕರಣಗಳ ಶೀಘ್ರ ವಿಲೇವಾರಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ಪೊಲೀಸ್ ಅಧಿಕಾ-ರಿಗಳು ನಿರಂತರವಾಗಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಮುನ್ನೆಚ್ಚ-ರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಅಗತ್ಯ ಪೊಲೀಸ್ ಬಂದೋಬಸ್ತ್ ಮತ್ತು ನಿಗಾವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದು ತಿಳಿಸಿದರು. ಸಾರ್ವಜನಿಕರಿಂದ ಬರುವ ದೂರುಗಳು ಮತ್ತು ಮನವಿಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಪೊಲೀಸ್ ಇಲಾಖೆ ಮತ್ತು ಸಾರ್ವಜನಿಕರ ನಡುವೆ ವಿಶ್ವಾಸಾರ್ಹ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಜನಸ್ನೇಹಿ ಪೊಲೀಸ್ ವ್ಯವಸ್ಥೆಗೆ ಆದ್ಯತೆ ನೀಡಬೇಕು ಎಂದು ಅಧಿಕಾ-ರಿಗಳಿಗೆ ಮಾರ್ಗದರ್ಶನ ನೀಡಲಾಯಿತು. ಸಭೆಯಲ್ಲಿ ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಗಳು, ಉಪವಿಭಾಗ ಮಟ್ಟದ ಅಧಿಕಾ-ರಿಗಳು ಹಾಗೂ ವಿವಿಧ ಪೊಲೀಸ್ ಠಾಣೆಗಳ ಅಧಿಕಾರಿಗಳು ಉಪಸ್ಥಿತರಿದ್ದು, ತಮ್ಮ ವ್ಯಾಪ್ತಿಯ ಅಪರಾಧ ಪ್ರಕರಣಗಳು, ತನಿಖೆಯ ಪ್ರಗತಿ ಹಾಗೂ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ನೀಡಿದರು.

## ನಾರಾಯಣಪೂರ ಬಲದಂಡೆ ಕಾಲುವೆಗಳ ವಿವಿಧ ಕಾಮಗಾರಿಯ ಟೆಂಡರ್ ತಡೆಹಿಯುವಂತೆ :ಕ ರಾ ರೈತ ಸಂಘ ಹಾಗೂ ಹಸಿರು ಸೇನೆ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಈಗಾಲೇ ರಾಜ್ಯದಲ್ಲಿ ಬರಗಾಲ ತಾಂಡವಾಡುತ್ತಿದ್ದು, ಇದರ ನಡುವೆ ಬಿತ್ತನೆ ಮಾಡಿದ ಬೆಳೆ ಉಳಿಸಿಕೊಳ್ಳುವುದಕ್ಕೆ ಈಗತಾನೇ ಕಾಲುವೆಗಳಿಗೆ ನೀರು ಹರಿಸಲಾಗಿದ್ದು ಇದರ ನಡುವೆ ಇಲಾಖೆಯ ಅಧಿಕಾರಿಗಳು ಗುತ್ತಿಗೆದಾರರ ಲಾಭಿಗೊಸ್ಕರ ಹಾಗೂ ಅಧಿಕಾ-ರಿಗಳ ಲಾಭಕ್ಕಾಗಿ ಟೆಂಡರ ಕಾಮಗಾರಿ ಕರೆದಿದ್ದು ವಿಪರ್ಯಾಸದ ಸಂಗತಿಯೇ ಆಗಿರುತ್ತದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಶಿವಪುತ್ರಪ್ಪ ನಂದಿಹಾಳ್ ಕೆ ಬಿ ಜೆ ಎನ್ ಎಲ್ ನ ಮುಖ್ಯ ಇಂಜಿನಿಯರ್ ಗೆ ಮನವಿಯನ್ನು ಸಲ್ಲಿಸಿದರು .**



ಈಗಾಗಲೇ ಕೇಲವು ಗ್ರಾಮ ಪಂಚಾಯತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಹೂಳೆತ್ತುವುದು ಹಾಗೂ ಜಂಗಲ್ ಕಟಿಂಗ್ ಕಾಮಗಾರಿ ಮಾಡಿದ್ದು, ಸದರಿ ಕಾಮಗಾರಿಯ ಸ್ಥಳದಲ್ಲಿಯೇ ಮತ್ತೊಮ್ಮೆ ಅನಧೀಕೃತ ಟೆಂಡರ ಕರೆದಿರುತ್ತಾರೆ. ಹಾಗಾಗಿ ರೈತರ ಉಳಿಯುವಿಗಾಗಿ ಸದರಿ 2026-27ನೇ ಸಾಲಿನಲ್ಲಿ ರಾಂಪೂರ ಏತ ನೀರಾವರಿ ಕಾಲುವೆ ಹಾಗೂ ನಾರಾಯಣಪೂರ ಬಲದಂಡ ಕಾಲುವೆಗಳ ವಿವಿಧ ಕಾಮಗಾ-ರಿಯ ಟೆಂಡರ್ ಕರೆದಿದ್ದು ಇದನ್ನು ತಡೆಹಿಡಿದು ಬೆಸಿಗೆ ಸಂದರ್ಭದಲ್ಲಿ ಕೈಗೆತ್ತಿಕೊಳ್ಳಬೇಕು.

ಪ್ರತಿ ವರ್ಷ ಕಾಲುವೆಗೆ ನೀರು ಬಿಟ್ಟ ಸಂದರ್ಭದಲ್ಲಿ ಟೆಂಡರ ಕಾಮಗಾರಿ ಕರೆಯುತ್ತಿದ್ದು ಇದರ ಬಗ್ಗೆ ನಾವು ಹಲವಾರು ಬಾರಿ ಮನವಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ ಮತ್ತೆ 2026-27ನೇ ಸಾಲಿನಲ್ಲಿಯೂ ಟೆಂಡರ ಕರೆದಿದ್ದು, ಸದರಿ ಈ ಟೆಂಡರ ಪ್ರಕ್ರಿಯೆಯನ್ನು ತಡೆಹಿಡಿದು ಮುಂದಿನ ಬೆಸಿಗೆ ಸಂದರ್ಭದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಬೆಕೆಂದರು ಈ ಕಾಮಗಾರಿಯನ್ನು ಮುಂದು ವರೆಸಿದ್ದೆ ಆದ-ಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಉಗ್ರವಾದ ಹೊರಾಟ ಹಮ್ಮಿಕೊಳ್ಳಲಾಗುವುದು ಎಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಹನುಮನಗೌಡ ,ಮಹೆಬೂಬಸಾಬ ಇದ್ದರು.

# ಹೆಲ್ಮೆಟ್ ಧರಿಸಿ ಸುರಕ್ಷಿತ ವಾಹನ ಚಾಲನೆಗೆ ಜಾಗೃತಿ ಅಭಿಯಾನ

❑ ನೈಜ್ಯ ದೆಸೆ ನ್ಯೂಸ್

**ಮಾನವಿ: ಮಾನವಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಸ್ತೆ ಸುರಕ್ಷತೆ ಹಾಗೂ ಅಪಘಾತಗಳ ನಿಯಂತ್ರಣ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಅಜೀಮ್ ಪ್ರೇಮ್‌ಜಿ ಫೌಂಡೇಷನ್, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಹೆಲ್ಮೆಟ್ ಜಾಗೃತಿ ಅಭಿಯಾನ ನಡೆಸಲಾಯಿತು.**



ಈ ಸಂದರ್ಭದಲ್ಲಿ ಪಿ.ಎಸ್.ಐ. (ಪ್ರೋ) ಮಾನವಿ ಅವರು ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಧರಿಸುವ ಮಹತ್ವದ ಕುರಿತು ಮಾಹಿತಿ ನೀಡಿ, ವಾಹನ ಚಲಾಯಿಸುವ ವೇಳೆ ಚಾಲಕರು ಹಾಗೂ ಹಿಂಬದಿ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ತಿಳಿಸಿದರು.

ಹೆಲ್ಮೆಟ್ ಕೇವಲ ಕಾನೂನು ಪಾಲನೆಗಾಗಿ ಮಾತ್ರವಲ್ಲದೆ, ಅಪಘಾತ ಸಂಭವಿಸಿದ ಸಂದರ್ಭದಲ್ಲಿ ತಲೆಗೆ ಉಂಟಾಗುವ ಗಂಭೀರ ಗಾಯಗಳಿಂದ ಜೀವ ರಕ್ಷಿಸುವ ಪ್ರಮುಖ ಸುರಕ್ಷತಾ ಸಾಧನವಾಗಿದೆ. ಆದ್ದರಿಂದ ಪ್ರತಿಯೊಬ್ಬ ದ್ವಿಚಕ್ರ ವಾಹನ ಸವಾರರು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಗುಣಮಟ್ಟದ ಹೆಲ್ಮೆಟ್ ಧರಿಸಿ ಸುರಕ್ಷಿತವಾಗಿ ವಾಹನ ಚಲಾಯಿಸಬೇಕು ಎಂದು ಅವರು ಮನವಿ ಮಾಡಿದರು.

ಅಜೀಮ್ ಪ್ರೇಮ್‌ಜಿ ಫೌಂಡೇಷನ್‌ನ ಪ್ರತಿನಿಧಿಗಳು ಹಾಗೂ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ, ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಬಳಕೆಯ ಅಗತ್ಯತೆ ಕು-ರಿತು ತಿಳಿಸಿದರು. "ಹೆಲ್ಮೆಟ್ ಧರಿಸಿ ? ಜೀವ ಉಳಿಸಿ", "ಸುರಕ್ಷಿತ ಪ್ರಯಾಣ-ಕ್ಕೆ ಹೆಲ್ಮೆಟ್ ಕಡ್ಡಾಯ" ಎಂಬ ಸಂದೇಶಗಳನ್ನು ಸಾರ್ವಜನಿಕರಿಗೆ ತಲುಪಿಸಲಾಯಿತು.

ಈ ಜಾಗೃತಿ ಅಭಿಯಾನದ ಮೂಲಕ ರಸ್ತೆ ಸುರಕ್ಷತೆ ಕುರಿತು ಸಾರ್ವಜನಿಕರಲ್ಲಿ ಅರಿವು ಹೆಚ್ಚಿಸುವ ಜೊತೆಗೆ, ಸಂಚಾರ ನಿಯಮಗಳ ಪಾಲನೆ ಮತ್ತು ಅಪಘಾತಗಳಿಂದ ಜೀವಹಾನಿ ತಡೆಯುವ ಉದ್ದೇಶ ಹೊಂದಲಾಗಿದೆ.

# ಕಾರುಣ್ಯಾಶ್ರಮದ ಸೇವೆಯು ಭಗವಂತನ ಪೂಜೆಗಿಂತ ಮಿಗಿಲಾದುದು -ನಾಗರಾಜ ಸಾಹುಕಾರ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಶ್ರೀಮತಿ ಮಲ್ಲಮ್ಮ ಮಾಡಿಸಿರವಾರ ಸಾಮಾಜಿಕ ಸಾಂಸ್ಕೃತಿಕ ಸೇವಾ ಟ್ರಸ್ಟ್ (ರಿ) ವತಿಯಿಂದ ಗುರು ಪೂರ್ಣಿಮೆಯ ಅಂಗವಾಗಿ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ " ಶರಣರ ವಚನಗಳ ಸಂಭ್ರಮ ಕಾರ್ಯಕ್ರಮ" ನೊಂದ ಜೀವಿಗಳಿಗೆ ಸ್ವರ ಸಮರ್ಪಣೆ ಎನ್ನುವ ವಿಶೇಷ ಕಾರ್ಯಕ್ರಮ ನೂರಾರು ಕಲಾವಿದರ ಸಮಕ್ಷಮದಲ್ಲಿ ತತ್ವಪದ ಜಾನಪದ ಭಜನಾಪದಗಳ ಮೂಲಕ ಆಶ್ರಯದಾತರುಗಳಿಗೆ ಸಂಗೀತದ ಕಂಪನ ಬೀರುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು.**




ಈ ಕಾರ್ಯಕ್ರಮವನ್ನು ಖ್ಯಾತ ಉದ್ಯಮಿಗಳಾದ ನಾಗರಾಜ ಸಾಹುಕಾರ ಮಾಡಿಸಿರವಾರ ಹಾಗೂ ಸಿದ್ದನಗೌಡ ಮಾಲಿ ಪಾಟೀಲ್ ಮತ್ತು ಹಲವಾರು ಗಣ್ಯಾತಿಗಣ್ಯರ ಸಮಕ್ಷಮದಲ್ಲಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದ ಪ್ರಾಥ-ರ್ನಾ ಗೀತೆಯನ್ನು ಆಶ್ರಮದ ಆಶ್ರಯದಾತೆ ವಸಂತ ಹಾಡುವ ಮೂಲಕ ಎಲ್ಲಾ ಕಲಾವಿದರ ಮನಸ್ಸೆಳೆದರು. ಆಶ್ರಮದಲ್ಲಿ ಗುರು ಪೂರ್ಣಿಮೆಯ ಅಂಗವಾಗಿ ಶ್ರೀ ಭ್ರಮರಾಂಭ ಮಲ್ಲಿಕಾರ್ಜುನ ತ್ರಿವಿಧ ದಾಸೋಹ ಟ್ರಸ್ಟ್ ಸಿಂಧನೂರು ನೀಲಮ್ಮ ಗಂ. ಮುದುಕಪ್ಪ ಗಾಳೇರು ಕುಟುಂಬ ಸಿಂಧನೂರು. ಮೇಘಾ ಮಂಜುನಾಥ ಸಾ. ಕನಕಗಿರಿ. ದಿವಂಗತ ನರಸಿಂಹಮೂರ್ತಿ ದುದ್ದುಪುಡಿ ಸಾ. ಸಾಸಲಮರಿ ಕ್ಯಾಂಪ್. ದಿ.ಜಿ. ವೆಂಕಟೇಶ್ವರಲು ಸಾಯಿ ವಿಹಾರಿ ಢಾಬಾ ಗಂಗಾವತಿ ರಸ್ತೆ ಸಿಂಧನೂರು ಹಾಗೂ ಅಲ್ಪಸಂಖ್ಯಾತರ ಮಹಾಜಿ ವಸತಿ ಶಾಲೆ ಸಿಂಧನೂರು ಇವರುಗಳಿಂದ ಆಶ್ರಮದಲ್ಲಿ ವಿವಿಧ ಬಗೆಯ ಮಹಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲುಗಳನ್ನು ವಿತರಿಸಿ ಶ್ರೀ ಸಾಯಿಬಾಬಾ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸಿ ಪ್ರಾರ್ಥಿಸಿ ಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಆಶ್ರಮದ ವತಿಯಿಂದ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಪನು ಪೂಜ್ಯಶ್ರೀ ಯರ್ರಿಸ್ವಾಮಿ ಶ್ರೀ ಗಾದಿಲಿಂಗೇಶ್ವರ ಆಶ್ರಮ ಬೆಳಗುರ್ಕಿ ಹಾಗೂ ಅಧ್ಯಕ್ಷತೆ ಹಿಸಿಕೊಂಡಿದ್ದ ಮೌಲಪ್ಪ ಮಾಡಸಿರವಾರ ಉದ್ಘಾಟಕರುಗಳಾದ ನಾಗರಾಜ ಸಾಹುಕಾರ ಮಾಡಸಿರವಾರ ಸಿದ್ದನಗೌಡ ಮಾಲಿ ಪಾಟೀಲ್ ಮಲ್ಲಾಪುರ ಸಾ. ವಿರುಪಾಪುರ ಅತಿಥಿಗಳಾಗಿದ್ದ ಯಮನಪ್ಪ ಕವಲಿ ಕೆ. ಬಸಾಪುರ ಇವರುಗಳನ್ನು ಆಶ್ರಮದಿಂದ ಗೌರವಿಸಿ ಆಶೀರ್ವದಿಸಲಾಯಿತು.

ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಉದ್ಯಮಿಗಳಾದ ನಾಗರಾಜ ಸಾಹುಕಾರ ಮಾಡಸಿರವಾರ ಮಾತನಾಡಿ ಇಂದಿನ ಗುರುಪೂರ್ಣಿಮೆಯ ಈ ಕಾರ್ಯಕ್ರಮ ಮತ್ತು ವಿಶೇಷವಾಗಿ ಕಾರುಣ್ಯ ಆಶ್ರಮದಲ್ಲಿರುವಂತ ಎಲ್ಲ ನೊಂದ ಜೀವಿಗಳಿಗೆ ಸ್ವರ ಸಮರ್ಪಣೆ ಮಾಡುವ ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾಗಿದೆ.

ನಮ್ಮ ಸಿಂಧನೂರಿನ ನಾರಾಯಣಪ್ಪ ಮಾಡಸಿರವಾರ ಅವರು ಕಲೆಗಾಗಿ ಕಲಾವಿದರ ಬದುಕಿಗಾಗಿ ತಮ್ಮನ್ನು ತಾವು ಮೀಸಲಿಟ್ಟಿದ್ದಾರೆ. ನಮ್ಮ ಸಿಂಧನೂರಿನ ಕಾರುಣ್ಯಾಶ್ರಮದ ಸೇವೆಯು ಭಗವಂತನ ಪೂಜೆ ಗಿಂತ ಮಿಗಿಲಾದುದು. ಹರೇಟನೂರಿನ ಹಿರೇಮಠ ಕುಟುಂಬ ಸಾಮಾನ್ಯ ಜಂಗಮರಾಗಿ ಇಡೀ ರಾಜ್ಯದಲ್ಲಿ ಕರುಣೆಯ ಕಾರುಣ್ಯ ಮೂರ್ತಿಗಳಾಗಿರುವುದು ನಮ್ಮ ಸಿಂಧನೂ-ರಿಗೆ ಘನತೆ ಗೌರವವನ್ನು ತಂದುಕೊಟ್ಟಿದ್ದಾರೆ. ಕಾರುಣ್ಯ ಆಶ್ರಮದ ಸೇವೆಯಲ್ಲಿ ನಾವು ನಮ್ಮ ಕುಟುಂಬ ಸದಾವಕಾಲ ಭಾಗಿಯಾಗುತ್ತೇವೆ ಎಂದು ಮಾತನಾಡಿದರು. ನಂತರ ಸಿದ್ದನಗೌಡ ಮಾಲಿ ಪಾಟೀಲ್ ಮಾತನಾಡಿ ನಿರಂತರ ಜೋಳಿಗೆಯ ಮೂಲಕ ಇಂತಹ ಒಂದು ಅತ್ಯದ್ಭುತ ಸುಂದರ ಸಂಸ್ಥೆಯನ್ನು ಕಟ್ಟಿರುವ ಕಾರುಣ್ಯ ಆಶ್ರಮದಲ್ಲಿ ಎಲ್ಲಾ ಕಲಾವಿದರುಗಳು ಹಮ್ಮಿಕೊಂಡಿರುವ ಈ ಕಾರ್ಯಕ್ರಮ ಪ್ರತಿಯೊಬ್ಬ ಗುರುಗಳಿಗೆ ಸಮರ್ಪಣೆ ಯಾಗುತ್ತದೆ. ಈ ಕಾರ್ಯಕ್ರಮದಲ್ಲಿ ಕಾರುಣ್ಯಾಶ್ರಮದ ತಾತನವರೇ ಅದೆಷ್ಟೇ ಅನಾಥ-ರು ನೊಂದವರು ಬಂದರೆ ಆಶ್ರಯ ಕುಡಿ ನಾವೆಲ್ಲ ನಿಮ್ಮ ಜೊತೆಗಿದ್ದೇವೆ ಎಂದು ಮಾತನಾಡಿ ಆಶ್ರಮದ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರು.

ನಂತರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಶ್ರೀಮತಿ ಮಲ್ಲಮ್ಮ ಮಾಡಸಿರವಾರ ಸಾಮಾಜಿಕ ಸಾಂಸ್ಕೃತಿಕ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರಾದ ಮೌಲಪ್ಪ ಮಾಡಸಿರವಾರ ಮಾತನಾಡಿ ಇಂದಿನ ಈ ಕಾರ್ಯಕ್ರಮ ಗುರುಗಳಿಗೆ ಮತ್ತು ಇಂತಹ ಅಂದ ಅನಾಥರ ಬಾಳಿಗೆ ಬೆಳಕಾದ ಮಹಾನ್ ಚೇತನಗಳಿಗೆ ಅಭಿನಂದನೆಗಳನ್ನು ಸಲ್ಲಿಸುವ ಉದ್ದೇಶ ಮತ್ತು ವಿಶೇಷವಾಗಿ ನೊಂದ ಜೀವಿಗಳಿಗೆ ಸ್ವರ ಸಮರ್ಪಣೆ ಮಾಡಿ ಅಥ-ರ್ಪೂರ್ಣವಾದಂತ ಪದಗಳಿಂದ ಇಲ್ಲಿನ ಆಶ್ರಯದಾದರೂ ಮರಿಸುವಂತಹ ಒಂದು ಸಣ್ಣ ಪ್ರಯತ್ನ ನಮ್ಮ ಹರೇಟನೂರಿನ ಹಿರೇಮಠ ಕುಟುಂಬ ಅಂಧ-ಅನಾಥರ ಬಾಳಲ್ಲಿ ಚೈತನ್ಯ ಮೂಡಿಸಿದೆ. ನಾವು ಈ ಕಾರುಣ್ಯ ಕುಟುಂಬದ ಸೇವೆಯಲ್ಲಿ ಭಾಗವಹಿಸುವುದು ಪೂರ್ವಜನ್ಮದ ಪುಣ್ಯ ಸಮಸ್ತ ಕರುನಾಡಿನ ಕಲಾವಿದರು ನಮ್ಮ ಕಾರುಣ್ಯಾಶ್ರಮದ ಸೇವೆಯ ಜೊತೆಗಿರುತ್ತಾರೆ. ನಮ್ಮ ತಂದೆಯವರ ಆದರ್ಶದಂತೆ ಮಾರ್ಗದರ್ಶನದಂತೆ ನಾನು ಈ ಸಂಸ್ಥೆಯ ಮೂಲಕ ಹಲವಾರು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದ್ದೇನೆ. ಕಾರುಣ್ಯ ಆಶ್ರಮದ ಗುರುಗಳೇ ನೀವು ಮಾಡುತ್ತಿರುವ ಈ ಸೇವೆ ಸರ್ವ ಸಮಾಜದ ಸರ್ವಧರ್ಮದ ಗುರುಗಳ ಪ್ರೀತಿಗೆ ಪಾತ್ರವಾಗಿದೆ. ನಿಮ್ಮನ್ನು ಯಾರು ಟೀಕಿಸುತ್ತಾರೆ ಅವರೇ ನಿಮ್ಮ ಈ ಸೇವೆಗೆ ಸ್ಫೂರ್ತಿಯಾಗಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ ಯಾವಾಗಲೂ ನಿರಂತರವಾಗಿ ನಾವು ಕಾರುಣ್ಯ ಆಶ್ರಮದ ಜೊತೆಗೆ ಸದಾವಕಾಲವಿರುತ್ತೇವೆ ಎಂದು ಮಾತನಾಡಿ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ನೂರಾರು ಕಲಾವಿದರು ಹಲವಾರು ತತ್ವ ಮತ್ತು ಜಾನಪದಗಳನ್ನಾಡಿ ಆಶ್ರಮದಲ್ಲಿ ಗುರು ಪೂರ್ಣಿಮೆ ಆಚರಿಸಿದರು. ಈ ಕಾರ್ಯಕ್ರಮದಲ್ಲಿ ಕಲಾವಿದರುಗಳಾದ ನಾರಾಯಣಪ್ಪ ಮಾಡಸಿರವಾರ. ಕೆ.ಭೀಮಣ್ಣ ಬೆಳಗುರ್ಕಿ. ಸತ್ಯಪ್ಪ ಕುರುಕುಂದ. ತಿಮ್ಮಣ್ಣ ಸಾಗರ್ ಕ್ಯಾಂಪ್. ಬಸನಗೌಡ ಜಿನ್ನಾಪುರ. ನಾಗರಾಜ ವಲ್ಕಂದಿನ್ನಿ. ದೇವರಾಜ ಗೋನವಾರ. ಹನುಮಂತ ಗದ್ರಟಗಿ. ಮುದಿಯಪ್ಪ ಕಂಬಳಿ ಹರೇಟನೂರು. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ ಮ-ರಿಯಪ್ಪ ಜ್ಯೋತಿ. ಹಾಗೂ ದಾಸೋಹ ದಾನಿಗಳಾದ ನೀಲಮ್ಮ ಗಂ. ಮುದುಕಪ್ಪ ಗಾಳೆರು ಪಿಡಬ್ಲ್ಯೂಡಿ ಕ್ಯಾಂಪ್ ಸಿಂಧನೂರು. ಶ್ರೀದೇವಿ ಗಂ.ಶ್ರೀನಿವಾಸ ದುದ್ದುಪುಡಿ ಸಾ. ಸಾಸಲಮರಿ ಕ್ಯಾಂಪ್ ಹಾಗೂ ನೂರಾರು ಕಲಾವಿದರುಗಳು ಭಾಗವಹಿಸಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಛಾಯಾಗ್ರಹಣ (Photography)

ಛಾಯಾಗ್ರಹಣ (Photography) ವೃತ್ತಿಯಲ್ಲಿ ಆಸಕ್ತಿ ಹೊಂದಿರುವವರಿಗೆ ಮೂಲಭೂತ (Basic) ತರಬೇತಿಯಿಂದ ಹಿಡಿದು ವೃತ್ತಿಪರ (Professional) ಡಿಪ್ಲೊಮಾವರೆಗೆ ಹಲವು ಕೋರ್ಸ್‌ಗಳು ಲಭ್ಯವಿವೆ. 12ನೇ ತರಗತಿಯ ನಂತರ :ಈಂ ಅಥವಾ ಡಿಪ್ಲೊಮಾ ಮಾಡಬಹುದು. ಹೆಚ್ಚುವರಿಯಾಗಿ, ಮೊಬೈಲ್ ಫೋಟೋಗ್ರಫಿ, ವೆಡ್ಡಿಂಗ್ ಫೋಟೋಗ್ರಫಿ ಮತ್ತು ಆನ್‌ಲೈನ್ ತರಗತಿಗಳು ಕನ್ನಡದಲ್ಲೂ ಲಭ್ಯವಿವೆ. ಕೋರ್ಸ್ ಪ್ರಕಾರಗಳುಪ್ರಮಾಣಪತ್ರ ಕೋರ್ಸ್ (Certificate in Photography): 3 ರಿಂದ 6 ತಿಂಗಳ ಅವಧಿ. ಕ್ಯಾಮೆರಾ ಸೆಟ್ಟಿಂಗ್ಸ್, ಲೈಟಿಂಗ್ ಮತ್ತು ಎಡಿಟಿಂಗ್ ಕಲಿಯಬಹುದು. ಡಿಪ್ಲೊಮಾ (Diploma in Photography): 1 ರಿಂದ 2 ವರ್ಷದ ಅವಧಿ. ಕಮರ್ಷಿಯಲ್ ಮತ್ತು ಫ್ಯಾಷನ್ ಫೋಟೋಗ್ರಫಿ ತರಬೇತಿ.ಸ್ಮಾರ್ಟ್‌ಫೋನ್ ಕೋರ್ಸ್‌ಗಳು: ಮೊಬೈಲ್‌ನಲ್ಲಿಯೇ ಉತ್ತಮ ಫೋಟೋ ತೆಗೆಯುವುದು ಹೇಗೆ ಎಂದು ಕಲಿಯಲು.ಪ್ರಮುಖ ಸಂಸ್ಥೆಗಳುಆನ್‌ಲೈನ್ ತರಬೇತಿ: ರೋರಿಂಗ್ ಫಿಲ್ಮ್ ಸ್ಕೂಲ್ ಮತ್ತು ಲೈಫ್ ಅಂಡ್ ಲೈಫ್ ಅಕಾಡೆಮಿಯ ಮೂಲಕ ಕನ್ನಡದಲ್ಲಿ ಕಲಿಯಬಹುದು.ಬೆಂಗಳೂರು (Class-room): ಬೆಂಗಳೂರಿನಲ್ಲಿರುವ ಶ್ರೀನಿ ಇನ್‌ಸ್ಟಿಟ್ಯೂಟ್, ಫ್ಲಕ್ಸ್, ಮತ್ತು ಲಿಸಾ ಸ್ಕೂಲ್ ಆಫ್ ಡಿಸೈನ್ ನಲ್ಲಿ ನೇರ ತರಬೇತಿ ಲಭ್ಯವಿದೆ.ಕಲಿಕೆಯ ವಿಷಯಗಳುಕ್ಯಾಮರಾ ಹಾರ್ಡ್‌ವೇರ್ ಮತ್ತು ಸೆಟ್ಟಿಂಗ್ಸ್: ಲೆನ್ಸ್, ಅಪರ್ಚರ್ (f-stop), ಶಟರ್ ಸ್ಪೀಡ್ ಮತ್ತು ಖಖಔ.ಬೆಳಕಿನ ನಿಯಂತ್ರಣ: ನೈಸರ್ಗಿಕ ಮತ್ತು ಸ್ಟುಡಿಯೋ ಲೈಟಿಂಗ್ ಬಳಕೆ.ಸಾಫ್ಟ್‌ವೇರ್: ಅಡೋಬ್ ಫೋಟೋಶಾಪ್ ಮತ್ತು ಲೈಟ್‌ರೂಮ್ ಮೂಲಕ ಫೋಟೋ ಎಡಿಟಿಂಗ್.ವಿಷಯಾಧಾರಿತ ಚಿತ್ರೀಕರಣ: ಭಾವಚಿತ್ರ (Portrait), ಉತ್ಪನ್ನ (Product), ಮತ್ತು ಆಹಾರ (Food) ಚಿತ್ರೀಕರಣ.

## ಆಗಸ್ಟ್ 2ರಂದು ಪೊಲೀಸ್ ಕಾನ್ಸ್ಟೇಬಲ್ ನೇಮಕಾತಿ ಪರೀಕ್ಷೆ: ಮಾನವಿಯಲ್ಲಿ ಸಕಲ ಸಿದ್ಧತೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಕರ್ನಾಟಕ ರಾಜ್ಯ ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗಳ ನೇಮಕಾತಿಗಾಗಿ ಆಗಸ್ಟ್ 2 ಭಾನುವಾರದಂದು ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗೆ ಮಾನ್ವಿ ತಾಲೂಕು ಆಡಳಿತವು ಎಲ್ಲಾ ರೀತಿಯ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ ಎಂದು ತಹಸೀಲ್ದಾರ ಭೀಮರಾಯ ಬಿ. ರಾಮಸಮುದ್ರ ತಿಳಿಸಿದ್ದಾರೆ.**



ಪರೀಕ್ಷೆಯನ್ನು ಶಾಂತಿಯುತ, ಸುಸೂತ್ರ ಹಾಗೂ ಪಾರದರ್ಶಕವಾಗಿ ನಡೆಸಲು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅಭ್ಯರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಮೂಲಸೌಕರ್ಯ, ಭದ್ರತೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಅವರು ಹೇಳಿದರು. ಮಾನ್ವಿ ತಾಲೂಕಿನಾದ್ಯಂತ ಒಟ್ಟು 7 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಹಾಗೂ ಸಂಬಂಧಿತ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಹಸೀಲ್ದಾರ ಭೀಮರಾಯ ಬಿ. ರಾಮಸಮುದ್ರ ತಿಳಿಸಿದರು. ಪರೀಕ್ಷಾ ಕೇಂದ್ರಗಳ ವಿವರ: ಲೋಯೋಲ ಪದವಿಪೂರ್ವ ಕಾಲೇಜು, ಮಾನವಿ ಬಾಲಕರ ಪದವಿಪೂರ್ವ ಕಾಲೇಜು, ಮಾನವಿ ಬಾಲಕಿಯರ ಪದವಿಪೂರ್ವ ಕಾಲೇಜು, ಮಾನವಿ ಕಲ್ಮಠ ಪದವಿಪೂರ್ವ ಕಾಲೇಜು, ಮಾನವಿ ಶಾರದ ಪದವಿಪೂರ್ವ ಕಾಲೇಜು, ಮಾನವಿ ಕಳಿಂಗ ಪದವಿಪೂರ್ವ ಕಾಲೇಜು, ಮಾನವಿ ಎಸ್.ಆರ್.ಎಸ್.ವಿ. ಎಸ್. ಪದವಿಪೂರ್ವ ಕಾಲೇಜು, ಮಾನವಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿ, ಪ್ರವೇಶ ಪತ್ರ ಸೇರಿದಂತೆ ಅಗತ್ಯ ದಾಖಲಾತಿಗಳನ್ನು ಕಡ್ಡಾಯವಾಗಿ ತರಬೇಕು. ಪರೀಕ್ಷಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಅಧಿಕಾರಿಗಳಿಗೆ ಸಹಕರಿಸುವಂತೆ ತಹಸೀಲ್ದಾರ ಭೀಮರಾಯ ಬಿ. ರಾಮಸಮುದ್ರ ಮನವಿ ಮಾಡಿದ್ದಾರೆ.

# ಅನಕ್ಷರತೆ, ಬಡತನ ಮತ್ತು ನಿರುದ್ಯೋಗ ಮಾನವ ಕಳ್ಳಸಾಗಣೆಗೆ ಪ್ರಮುಖ ಕಾರಣ

## ವಿದ್ಯಾರ್ಥಿಗಳು ಕಾನೂನು ಅರಿತು ಸಮಾಜದಲ್ಲಿ ಜಾಗೃತಿ ಮೂಡಿಸಬೇಕು: ಸಿವಿಲ್ ನ್ಯಾಯಾಧೀಶ ಆನಂದ ಎಚ್. ಕೊಣ್ಣೂರು

ನೈಜ್ಯ ದೆಸೆ ನ್ಯೂಸ್



**ಮಾನ್ವಿ: ಅನಕ್ಷರತೆ, ಬಡತನ, ಆರ್ಥಿಕ ಹಿಂದುಳಿತನ ಹಾಗೂ ನಿರುದ್ಯೋಗದಂತಹ ಸಾಮಾಜಿಕ ಸಮಸ್ಯೆಗಳನ್ನು ದುರುಪಯೋಗಪಡಿಸಿಕೊಳ್ಳುವ ಕಳ್ಳಸಾಗಣೆ ಜಾಲಗಳು ಮಹಿಳೆಯರು, ಮಕ್ಕಳು ಹಾಗೂ ಅಪ್ರಾಪ್ತ ಬಾಲಕಿಂ-ಮರನ್ನು ವಿವಿಧ ರೀತಿಯ ಆಸೆ-ಆಮಿಷಗಳಿಗೆ ಒಳಪಡಿಸಿ ಶೋಷಣೆಗೆ ದೂಡುತ್ತಿವೆ.**

ಮಾನವ ಕಳ್ಳಸಾಗಣೆಯಂತಹ ಗಂಭೀರ ಅಪರಾಧವನ್ನು ತಡೆಯಲು ವಿದ್ಯಾರ್ಥಿಗಳು ಕಾನೂನುಗಳ ಬಗ್ಗೆ ಅರಿವು ಹೊಂದುವುದರ ಜೊತೆಗೆ ತಮ್ಮ ಕುಟುಂಬ ಮತ್ತು ಸಮಾಜದಲ್ಲಿಯೂ ಜಾಗೃತಿ ಮೂಡಿಸಬೇಕು ಎಂದು ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಆನಂದ ಎಚ್. ಕೊಣ್ಣೂರು ಹೇಳಿದರು. ಪಟ್ಟಣದ ಕೋನಾಪುರಪೇಟೆಯ ಸರ್ಕಾರಿ ಪ್ರೌಢಶಾಲೆಯ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ನ್ಯಾಯವಾದಿಗಳ ಸಂಘ, ಪೊಲೀಸ್ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನವ ಕಳ್ಳಸಾಗಣೆ ವಿರೋಧಿ ದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾನೂನು ಅರಿವು ಮತ್ತು ಉಚಿತ ಕಾನೂನು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಾನವ ಕಳ್ಳಸಾಗಣೆ ಕೇವಲ ಒಬ್ಬ ವ್ಯಕ್ತಿಯ ಸಮಸ್ಯೆಯಲ್ಲ. ಇದು ಮಾನವ ಹಕ್ಕುಗಳಿಗೆ ಧಕ್ಕೆ ತರುವ ಗಂಭೀರ ಸಾಮಾಜಿಕ ಅಪರಾಧವಾಗಿದೆ. ಸಮಾಜದಲ್ಲಿನ ಬಡತನ, ಅನಕ್ಷರತೆ, ನಿರುದ್ಯೋಗ ಹಾಗೂ ಆರ್ಥಿಕ ಅಸಮಾನತೆಗಳನ್ನು ದುರುಪಯೋಗಪಡಿಸಿಕೊಳ್ಳುವ ದುಷ್ಕರ್ಮಿಗಳು ಉದ್ಯೋಗ, ಹೆಚ್ಚಿನ ಸಂಬಳ, ಉತ್ತಮ ಜೀವನ, ಮದುವೆ ಹಾಗೂ ಇತರ ಸೌಲಭ್ಯಗಳ ಭರವಸೆ ನೀಡಿ ಅಮಾಯಕ ಜನರನ್ನು ವಂಚಿಸುತ್ತಿದ್ದಾರೆ ಎಂದು ಹೇಳಿದರು. ವಿಶೇಷವಾಗಿ ಆರ್ಥಿಕ ಸಂಕಷ್ಟದಲ್ಲಿರುವ ಕುಟುಂಬಗಳ ಮಹಿಳೆಯರು, ಮಕ್ಕಳು ಹಾಗೂ ಅಪ್ರಾಪ್ತ ಬಾಲಕಿಯರನ್ನು ಗುರಿಯಾಗಿಸಿಕೊಂಡು ಕಳ್ಳಸಾಗಣೆ ನಡೆಸಲಾಗುತ್ತಿದೆ.

ಕೆಲವರನ್ನು ಉದ್ಯೋಗದ ನೆಪದಲ್ಲಿ ಹಾಗೂ ಕೆಲವರನ್ನು ಮದುವೆಯ ಭರವಸೆ ನೀಡಿ ಬೇರೆ ಜಿಲ್ಲೆ ಅಥವಾ ರಾಜ್ಯಗಳಿಗೆ ಕರೆದೊಯ್ಯಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಬಾಲ್ಯವಿವಾಹದ ಹೆಸರಿನಲ್ಲಿ ಬಾಲಕಿಂ-ಮರನ್ನು ಸ್ಥಳಾಂತರಿಸಿ ನಂತರ ವಿವಿಧ ರೀತಿಯ ಶೋಷಣೆಗೆ ಒಳಪಡಿಸಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಕಳ್ಳಸಾಗಣೆಗೆ ಒಳಗಾದವರನ್ನು ವೇಶ್ಯಾವಾಟಿಕೆ, ಬಲವಂತದ ಭಿಕ್ಷಾಟನೆ, ಜೀತಪದ್ಧತಿ, ಬಾಲಕಾರ್ಮಿಕ ಪದ್ಧತಿ, ಅಕ್ರಮ ಚಟುವಟಿಕೆಗಳು, ಅಪರಾಧ ಕೃತ್ಯಗಳು ಹಾಗೂ ಅಂಗಾಂಗಗಳ ಅಕ್ರಮ ಸಾಗಣೆ ಸೇರಿದಂತೆ ವಿವಿಧ ಅಪರಾಧ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಸಾಧ್ಯತೆಗಳಿವೆ. ಇಂತಹ ಅಪರಾಧಗಳ ಹಿಂದೆ ಸಂಘಟಿತ ಜಾಲಗಳು ಕಾರ್ಯನಿರ್ವಹಿಸುವುದರಿಂದ ಸಾರ್ವಜನಿಕರು ಹೆಚ್ಚು ಎಚ್ಚರಿಕೆ ವಹಿಸುವ ಅಗತ್ಯವಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳು ಹಾಗೂ ಮೊಬೈಲ್ ಮೂಲಕ ಅಪರಿಚಿತ ವ್ಯಕ್ತಿಗಳ ಸಂಪರ್ಕಕ್ಕೆ ಬರುವಾಗ ಎಚ್ಚರಿಕೆಯಿಂದಿರಬೇಕು. ಅಪರಿಚಿತ ವ್ಯಕ್ತಿಗಳು ನೀಡುವ ಉದ್ಯೋಗ, ಮದುವೆ, ಹಣ ಅಥವಾ ಇತರ ಆಕರ್ಷಕ ಭರವಸೆಗಳನ್ನು ಸುಲಭವಾಗಿ ನಂಬಬಾರದು. ಯಾವುದೇ ಅನುಮಾನಾಸ್ಪದ ಘಟನೆ ಅಥವಾ ವ್ಯಕ್ತಿಯ ಕುರಿತು ತಕ್ಷಣ ಪಾಲಕರು, ಶಿಕ್ಷಕರು, ಪೊಲೀಸ್ ಇಲಾಖೆ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದು ಸಲಹೆ ನೀಡಿದರು.

ಮಾನವ ಕಳ್ಳಸಾಗಣೆ ಕುರಿತು ವಿದ್ಯಾರ್ಥಿಗಳು ಜಾಗೃತರಾಗುವುದರ ಜೊತೆಗೆ ತಮ್ಮ ಪಾಲಕರು, ಸ್ನೇಹಿತರು ಹಾಗೂ ಸುತ್ತಮುತ್ತಲಿನ ಜನರಲ್ಲಿಯೂ ಅರಿವು ಮೂಡಿಸಬೇಕು. ಮಕ್ಕಳ ಸುರಕ್ಷತೆ ಕೇವಲ ಪಾಲಕರ ಅಥವಾ ಸರ್ಕಾರದ ಜವಾಬ್ದಾರಿಯಲ್ಲ; ಸಮಾಜದ ಪ್ರತಿಯೊಬ್ಬ ನಾಗರಿಕನೂ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. ಉಚಿತ ಕಾನೂನು ನೆರವು ಸೌಲಭ್ಯ ತಾಲೂಕು ಕಾನೂನು ಸೇವಾ ಸಮಿತಿಯ ಮೂಲಕ ಮಹಿಳೆಯರು, ಮಕ್ಕಳು, ಆರ್ಥಿಕವಾಗಿ ದುರ್ಬಲ ವರ್ಗದವರು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಉಚಿತ ಕಾನೂನು ನೆರವು ಒದಗಿಸಲಾಗುತ್ತಿದೆ. ಆರ್ಥಿಕ ಸಂಕಷ್ಟದಿಂದ ನ್ಯಾಯಾಲಯದಲ್ಲಿ ತಮ್ಮ ಪ್ರಕರಣಗಳನ್ನು ಸಮರ್ಪಕವಾಗಿ ಎದುರಿಸಲು ಸಾಧ್ಯವಾಗದ ಅರ್ಹ ವ್ಯಕ್ತಿಗಳಿಗೆ ಉಚಿತವಾಗಿ ವಕೀಲರನ್ನು ನೇಮಿಸಿಕೊಡಲಾಗುವುದು ಎಂದು ಆನಂದ ಎಚ್. ಕೊಣ್ಣೂರು ತಿಳಿಸಿದರು. ಅರ್ಹ ಫಲಾನುಭವಿಗಳಿಗೆ ಉಚಿತ ಕಾನೂನು ಸಲಹೆ, ಕಾನೂನು ಅರಿವು ಹಾಗೂ ಅಗತ್ಯವಿರುವ ಸಂದರ್ಭದಲ್ಲಿ ನ್ಯಾಯಾಂಗ ಸಹಾಯವೂ ಲಭ್ಯವಿದೆ. ಕಾನೂನು ಸೇವಾ ಸಮಿತಿಯ ಸೌಲಭ್ಯಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಇಂದಿನ ದಿನಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಾನೂನುಗಳ ಬಗ್ಗೆ ಮೂಲಭೂತ ಜ್ಞಾನ ಹೊಂದಿರುವುದು ಅತ್ಯಗತ್ಯವಾಗಿದೆ. ಕಾನೂನು ಅರಿವು ವ್ಯಕ್ತಿಯ ಹಕ್ಕುಗಳ ರಕ್ಷಣೆಗೆ ಮಾತ್ರವಲ್ಲದೆ ಸಮಾಜದಲ್ಲಿನ ಅನ್ಯಾಯ, ಶೋಷಣೆ ಹಾಗೂ ಅಪರಾಧಗಳನ್ನು ತಡೆಯಲು ಸಹ ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳು ಕಾನೂನನ್ನು ಗೌರವಿಸಿ, ಕಾನೂನುಬದ್ಧ ಜೀವನ ನಡೆಸುವ ಮೂಲಕ ಉತ್ತಮ ಸಮಾಜ ನಿರ್ಮಾಣದಲ್ಲಿ ಪಾಲ್ಗೊಳ್ಳಬೇಕು ಎಂದು ಹೇಳಿದರು. ಅನುಮಾನಾಸ್ಪದ ಘಟನೆಗಳ ಮಾಹಿತಿ ನೀಡಲು ಮನವಿ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀದೇವಿ ಶರಣ ಪಾಟೀಲ್, ಅನಕ್ಷರತೆ, ಬಡತನ ಮತ್ತು ನಿರುದ್ಯೋಗದಿಂದಾಗಿ ಅನೇಕ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಇಂತಹ ಪರಿಸ್ಥಿತಿಯನ್ನು ಬಳಸಿಕೊಳ್ಳುವ ಕೆಲ ದುಷ್ಕರ್ಮಿಗಳು ಉದ್ಯೋಗ ಮತ್ತು ಮದುವೆಯ ಆಸೆ ತೋರಿಸಿ ಮಹಿಳೆಯರು ಹಾಗೂ ಮಕ್ಕಳನ್ನು ವಂಚಿಸಿ ಶೋಷಣೆಗೆ ಒಳಪಡಿಸುತ್ತಿದ್ದಾರೆ ಎಂದು ತಿಳಿಸಿದರು. ಮಾನವ ಕಳ್ಳಸಾಗಣೆಯಲ್ಲಿ ವ್ಯಕ್ತಿಗಳಷ್ಟೇ ಅಲ್ಲದೆ ಸಂಘಟಿತ ಜಾಲಗಳು ಹಾಗೂ ಕೆಲವು ಗುಂಪುಗಳೂ ಭಾಗಿಯಾಗಿರಬಹುದು. ಆದ್ದರಿಂದ ಅಪರಿಚಿತ ವ್ಯಕ್ತಿಗಳು ಮಕ್ಕಳನ್ನು ಅಥವಾ ಮಹಿಳೆಯರನ್ನು ಅನುಮಾನಾಸ್ಪದವಾಗಿ ಕರೆದೊಯ್ಯುವುದು, ಸುಳ್ಳು ಉದ್ಯೋಗದ ಭರವಸೆ ನೀಡುವುದು ಅಥವಾ ಬಲವಂತವಾಗಿ ಸ್ಥಳಾಂತರಿಸಲು ಯತ್ನಿಸುವಂತಹ ಘಟನೆಗಳು ಕಂಡುಬಂದರೆ ತಕ್ಷಣ ಪೊಲೀಸ್ ಇಲಾಖೆ ಅಥವಾ ಮಕ್ಕಳ ಸಹಾಯವಾಣಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು. ಸಮಯಕ್ಕೆ ಸರಿಯಾಗಿ ಮಾಹಿತಿ ನೀಡುವುದರಿಂದ ಸಂಭವನೀಯ ಅಪರಾಧಗಳನ್ನು ತಡೆಯಲು ಹಾಗೂ ಸಂತ್ರಸ್ತರನ್ನು ಸುರಕ್ಷಿತವಾಗಿ ರಕ್ಷಿಸಲು ಸಾಧ್ಯವಾಗುತ್ತದೆ. ಸಾರ್ವಜನಿಕರ ಎಚ್ಚರಿಕೆ ಮತ್ತು ಸಹಕಾರವು ಮಾನವ ಕಳ್ಳಸಾಗಣೆ ವಿರುದ್ಧದ ಹೋರಾಟದಲ್ಲಿ ಅತ್ಯಂತ ಪ್ರಮುಖವಾಗಿದೆ ಎಂದು ತಿಳಿಸಿದರು. ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗಿ ಕಾರ್ಯಕ್ರಮದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರಾದ ಅರ್ಚನಾ ಯಾದವ್, ಪಿಎಸ್‌ಐ ಶರಣಪ್ಪ, ಶಾಲೆಯ ಮುಖ್ಯಗುರು ವಿರೂಪಾಕ್ಷಪ್ಪ, ತಾಲೂಕು ನ್ಯಾಯವಾದಿಗಳ ಸಂಘದ ಅಧ್ಯಕ್ಷ ರವಿಕುಮಾರ ಪಾಟೀಲ್, ಉಪಾಧ್ಯಕ್ಷ ವಿಶ್ವನಾಥರಾಯಪ್ಪ, ಶಿವಪ್ಪ ಸುಂಕನೂರು, ಪ್ರಧಾನ ಕಾರ್ಯದರ್ಶಿ ಯಲ್ಲಪ್ಪ ಹಿರೇಬಾದರದಿನ್ನಿ, ಸ್ಟೆಲ್ಲಾ ಶಾರ್ಲೆಟ್, ಚಂದ್ರಕಲಾ, ಗೂಗಲ್ ನಾಗರಾಜ, ಶಿಕ್ಷಣ ಇಲಾಖೆಯ ದೈಹಿಕ ಪರಿವೀಕ್ಷಕ ಮಾರುತಿ, ಇಸಿಒ ಮಹೇಶಕುಮಾರ, ಶಾಲಾ ಸುಧಾರಣಾ ಸಮಿತಿಯ ಉಪಾಧ್ಯಕ್ಷೆ ಬಸಮ್ಮ, ಹಿರಿಯ ವಕೀಲರಾದ ಚನ್ನಬಸವನಾಯಕ, ಶಕೀಲ್ ಬಾದಯಿ, ಶ್ರೀನಿವಾಸ ನಂದಿಹಾಳ್, ಜಗದೀಶ ಬಾಗಲವಾಡ, ದತ್ತಾತ್ರೇಯ ಹಿರೀಕೋಟ್ನೆಕಲ್, ಶಶಿಕಾಂತಯ್ಯಸ್ವಾಮಿ, ಅಮೃತಾ, ಶಾಲೆಯ ಶಿಕ್ಷಕರಾದ ನವೀನ್ ಕುಮಾರ, ದೈಹಿಕ ಶಿಕ್ಷಕ ಮೌನೇಶ ಪೋತ್ನಾಳ್ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾನವ ಕಳ್ಳಸಾಗಣೆಯ ದುಷ್ಪರಿಣಾಮಗಳು, ಕಾನೂನು ರಕ್ಷಣೆ, ಮಕ್ಕಳ ಮತ್ತು ಮಹಿಳೆಯರ ಹಕ್ಕುಗಳು, ಉಚಿತ ಕಾನೂನು ನೆರವು ಹಾಗೂ ಅಪರಾಧ ತಡೆಗೆ ಸಾರ್ವಜನಿಕರ ಪಾತ್ರ ಕುರಿತು ಮಾಹಿತಿ ನೀಡಲಾಯಿತು.

# ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಗುರುಪೂರ್ಣಿಮ ಆಚರಣೆ

## ರಾಮನ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಶ್ರೀ ನೀಲಕಂಠೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಗುರುಪೂರ್ಣಿಮ ಮಹೋತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಪರಮಪೂಜ್ಯ ಭಕ್ತರಾಜ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.**



ಈ ಸಂದರ್ಭದಲ್ಲಿ ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ಪ್ರಥಮೋಪಚಾರ ವಿಭಾಗದ ವಕ್ತಾರರಾದ ಡಾ. ರೂಪಾ ಫಡ್ನವಿಸ್ ಮಾತನಾಡಿ, ಭಾರತದಲ್ಲಿ ರಾಮರಾಜ್ಯ ಹಾಗೂ ಈಶ್ವರೀಯ ರಾಜ್ಯದ ನಿರ್ಮಾಣ ಆಧ್ಯಾತ್ಮಿಕ ತತ್ವಗಳಿಂದ ಮಾತ್ರ ಸಾಧ್ಯವಾಗುತ್ತದೆ. ಪ್ರತಿಯೊಬ್ಬರೂ ಶ್ರೀರಾಮನ ಆದರ್ಶಗಳು ಹಾಗೂ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ರಾಷ್ಟ್ರ ಮತ್ತು ಧರ್ಮದ ರಕ್ಷಣೆಗೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಅವರು ಮುಂದುವರಿದು, ಗುರುದೇವರ ಜಪ, ತ್ಯಾಗ, ಕುಲದೈವದ ಆರಾಧನೆ, ಭಗವಂತನ ನಾಮಸ್ಮರಣೆ, ಧರ್ಮಪ್ರಚಾರ ಹಾಗೂ ಸತ್ಪಾತ್ರರಿಗೆ, ಸಂತರಿಗೆ ಮತ್ತು ಗುರುಗಳಿಗೆ ನೀಡುವ ದಾನವೇ ಶ್ರೇಷ್ಠವಾಗಿದೆ ಎಂದು ತಿಳಿಸಿದರು. ರಾಮರಾಜ್ಯದ ಸ್ಥಾಪನೆಗಾಗಿ ರಾಮರಕ್ಷಾ ಸ್ತೋತ್ರ ಹಾಗೂ ಹನುಮಾನ್ ಚಾಲೀಸಾ ಪಠಣದ ಮೂಲಕ ಸನಾತನ ಧರ್ಮದ ಬೆಳವಣಿಗೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಹೇಳಿದರು. ಇದೇ ವೇಳೆ ವ್ಯಾಸಪೀಠದ ಮೂಲಕ ವಿಜಯಲಕ್ಷ್ಮಿ ಚಿಂಚೋಳಿ ವಿಶೇಷ ಉಪನ್ಯಾಸ ನೀಡಿದರು. ಸನಾತನ ಹಿಂದೂ ಸಮಿತಿಯಿಂದ ಆಯುರ್ವೇದ ಔಷಧಿಗಳು, ನಿತ್ಯ ದೇವತಾ ಪೂಜಾ ಸಾಮಗ್ರಿಗಳು ಹಾಗೂ ಸನಾತನ ಧರ್ಮ ಕುರಿತ ಪುಸ್ತಕಗಳ ಪ್ರದರ್ಶನವೂ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಹಿಂದೂ ಜನಜಾಗೃತಿ ಸಮಿತಿಯ ತಾಲೂಕು ಸಮನ್ವಯಕರಾದ ಮಾರುತಿನಾಯಕ, ದುರ್ಗಪ್ಪ, ರಾಜಶೇಖರ, ವಿನೋದಕುಮಾರ, ಲತಾ ಪತ್ತೇಪುರ್, ವಿನೋದ್ ಮುಳ್ಳೂರು, ಕೃಷ್ಣವೇಣಿ, ಬಿ.ವಿ. ರೆಡ್ಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ದುರ್ಘಟನೆಗೆ ಕಾಯುತ್ತಿದೆಯೇ ಶಿಕ್ಷಣ ಇಲಾಖೆ

## ರಾಯಚೂರಿನ ಹುಂಡೆಕಾರ್ ಕಾಲೋನಿ ಉರ್ದು ಶಾಲೆಯ ಶಿಥಿಲ ಕಟ್ಟಡದಿಂದ ವಿದ್ಯಾರ್ಥಿಗಳ ಜೀವಕ್ಕೆ ಅಪಾಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ನಗರದ ಎಲ್.ಬಿ.ಎಸ್. ನಗರದ ಹುಂಡೆಕಾರ್ ಕಾಲೋನಿಯ ಸರ್ಕಾರಿ ಕಿರಿಯ ಪ್ರಾಥಮಿಕ (ಉರ್ದು) ಶಾಲೆಯ ಕಟ್ಟಡವು ಅತ್ಯಂತ ಶಿಥಿಲಾವಸ್ಥೆಗೆ ತಲುಪಿದ್ದು, ವಿದ್ಯಾರ್ಥಿಗಳು ಜೀವಭಯದ ನಡುವೆಯೇ ಪಾಠ ಕಲಿಯುವ ದುಸ್ಥಿತಿ ನಿರ್ಮಾಣವಾಗಿದೆ. ಶಾಲಾ ಕಟ್ಟಡದ ಛಾವಣಿಯಿಂದ ಸಿಮೆಂಟ್ ಚಕ್ಕೆಗಳು ಉದುರಿಬೀಳುತ್ತಿದ್ದು, ಒಳಭಾಗದ ಕಬ್ಬಿಣದ ರಾಡ್‌ಗಳು ಹೊರಗೆ ಕಾಣಿಸುತ್ತಿವೆ.**




ಯಾವುದೇ ಕ್ಷಣದಲ್ಲಿ ಛಾವಣಿಯ ಭಾಗ ಕುಸಿದು ದುರ್ಘಟನೆ ಸಂಭವಿಸುವ ಆತಂಕ ವ್ಯಕ್ತವಾಗಿದೆ. ಮಳೆ ಬಂದಾಗ ತರಗತಿ ಕೊಠಡಿಗಳೊಳಗೆ ನೀರು ಸೋರುತ್ತಿದ್ದು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಶಿಥಿಲಗೊಂಡ ಕಟ್ಟಡದಲ್ಲಿ ಮಕ್ಕಳಿಗೆ ಪಾಠ ಮಾಡಿಸುವುದು ಅಪಾಯಕಾರಿಯಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಅನಾಹುತ ಸಂಭವಿಸುವ ಸಾಧ್ಯತೆಯನ್ನು ತಳ್ಳಿಹಾಕಲಾಗದು ಎಂದು ವಿದ್ಯಾರ್ಥಿಗಳ ಪೋಷಕರು ಆತಂಕ ವ್ಯಕ್ತಪಡಿಸಿದ್ದಾರೆ. ಶಾಲೆಗೆ ಕಾಂಪೌಂಡ್ ಗೋಡೆ ಇಲ್ಲದಿರುವುದರಿಂದ ಹೊರಗಿನ ವ್ಯಕ್ತಿಗಳು ಹಾಗೂ ಪ್ರಾಣಿಗಳು ಶಾಲಾ ಆವರಣಕ್ಕೆ ಸುಲಭವಾಗಿ ಪ್ರವೇಶಿಸುತ್ತಿವೆ.

ಇದರಿಂದ ವಿದ್ಯಾರ್ಥಿಗಳ ಸುರಕ್ಷತೆಗೆ ಧಕ್ಕೆಯಾಗುವ ಜೊತೆಗೆ ಶಾಲೆಯ ಶೈಕ್ಷಣಿಕ ವಾತಾವರಣಕ್ಕೂ ತೊಂದರೆಯಾಗುತ್ತಿದೆ. ಅಲ್ಲದೆ, ಶಾಲೆಯಲ್ಲಿ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆಯೂ ಸಮರ್ಪಕವಾಗಿಲ್ಲದಿರುವುದರಿಂದ ವಿದ್ಯಾರ್ಥಿಗಳ ಆರೋಗ್ಯದ ಮೇಲೂ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆಯಿದೆ ಎಂದು ಪೋಷಕರು ದೂರಿದ್ದಾರೆ. ಈ ಹಿನ್ನೆಲೆಯಲ್ಲಿ ಶಾಲಾ ವಿದ್ಯಾರ್ಥಿಗಳ ಪೋಷಕರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಶಾಲೆಯ ಶಿಥಿಲ ಕಟ್ಟಡವನ್ನು ತಕ್ಷಣ ಪರಿಶೀಲಿಸಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಕಟ್ಟಡವನ್ನು ದುರಸ್ತಿಗೊಳಿಸಿ ಸುರಕ್ಷಿತಗೊಳಿಸಬೇಕು ಅಥವಾ ಶೀಘ್ರವೇ ಹೊಸ ಶಾಲಾ ಕಟ್ಟಡ ನಿರ್ಮಿಸಬೇಕು. ಜೊತೆಗೆ ಶಾಲೆಗೆ ಕಾಂಪೌಂಡ್ ಗೋಡೆ ನಿರ್ಮಿಸಿ, ಸುರಕ್ಷಿತ ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ತುರ್ತು ಆಧಾರದ ಮೇಲೆ ಒದಗಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಮನವಿಯಲ್ಲಿ, "ಈ ಗಂಭೀರ ಸಮಸ್ಯೆಯನ್ನು ನಿರ್ಲಕ್ಷಿಸಿ ಭವಿಷ್ಯದಲ್ಲಿ ಯಾವುದೇ ಅಪಘಾತ ಸಂಭವಿಸಿ ವಿದ್ಯಾರ್ಥಿಗಳು ಅಥವಾ ಶಿಕ್ಷಕರಿಗೆ ಗಾಯ ಅಥವಾ ಪ್ರಾಣಹಾನಿಯಾದರೆ, ಅದರ ಸಂಪೂರ್ಣ ಹೊಣೆಗಾರಿಕೆಯನ್ನು ಸಂಬಂಧಪಟ್ಟ ಶಿಕ್ಷಣ ಇಲಾಖೆ ಹಾಗೂ ಅಧಿಕಾರಿಗಳು ವಹಿಸಬೇಕಾಗುತ್ತದೆ" ಎಂದು ಎಚ್ಚರಿಸಲಾಗಿದೆ. ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯ ಪ್ರತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ಸಲ್ಲಿಸಲಾಗಿದೆ. ಶಾಲೆಯ ದುಸ್ಥಿತಿಯನ್ನು ತೋರಿಸುವ ಛಾಯಾಚಿತ್ರಗಳನ್ನು ಸಹ ಮನವಿಯೊಂದಿಗೆ ಲಗತ್ತಿಸಿ, ಸಮಸ್ಯೆಯ ಗಂಭೀರತೆಯನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಈ ಸಂದರ್ಭದಲ್ಲಿ ಸಾಮಾಜಿಕ ಕಾರ್ಯಕರ್ತರಾದ ಮೊಹಮ್ಮದ್ ಗೌಸ್ ಮುಲ್ಲಾ, ಸಮೀರ್, ತಬ್ರೇಜ್ ಮುಜಾಹಿದ್, ಸಲೀಂ, ತಾಹೇರ್, ನಿಯಮ್ರಾಜ್, ಆದಿಲ್, ಉಸ್ಮಾನ್, ಇಮ್ರಾನ್ ಹಾಗೂ ಸದ್ದಾಂ ಉಪಸ್ಥಿತರಿದ್ದು, ಶಾಲೆಯ ಸಮಸ್ಯೆಗೆ ತಕ್ಷಣ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿದರು.

ಈ ಕುರಿತು ಅವರು ಮಾತನಾಡಿ, "ಮಕ್ಕಳ ಸುರಕ್ಷತೆ ಎಲ್ಲಕ್ಕಿಂತ ಮುಖ್ಯ. ಯಾವುದೇ ಅನಾಹುತ ಸಂಭವಿಸುವ ಮೊದಲು ಜಿಲ್ಲಾಡಳಿತ ಹಾಗೂ ಶಿಕ್ಷಣ ಇಲಾಖೆ ತಕ್ಷಣ ಕ್ರಮ ಕೈಗೊಂಡು ವಿದ್ಯಾರ್ಥಿಗಳ ಜೀವವನ್ನು ರಕ್ಷಿಸಬೇಕು. ಅಧಿಕಾರಿಗಳ ನಿರ್ಲಕ್ಷ್ಯದಿಂದ ಅಮಾಯಕ ಮಕ್ಕಳ ಜೀವಕ್ಕೆ ಅಪಾಯ ಉಂಟಾಗಬಾರದು. ಈ ಸಮಸ್ಯೆಯನ್ನು ಅತ್ಯಂತ ತುರ್ತು ಆದ್ಯತೆಯೊಂದಿಗೆ ಪರಿಗಣಿಸಿ, ಶಾಶ್ವತ ಪರಿಹಾರ ಕಲ್ಪಿಸಬೇಕು" ಎಂದು ಒತ್ತಾಯಿಸಿದರು.

ಶಾಲಾ ಕಟ್ಟಡದ ದುಸ್ಥಿತಿಯ ಕುರಿತು ಪೋಷಕರು ಹಾಗೂ ಸ್ಥಳೀಯರು ಹಲವು ಬಾರಿ ಗಮನ ಸೆಳೆದಿದ್ದರೂ, ಇನ್ನೂ ಸಮರ್ಪಕ ಕ್ರಮ ಕೈಗೊಳ್ಳದಿರುವ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ. ಯಾವುದೇ ದುರ್ಘಟನೆ ಸಂಭವಿಸಿದ ನಂತರ ಕ್ರಮ ಕೈಗೊಳ್ಳುವುದಕ್ಕಿಂತ ಮುಂಚಿತವಾಗಿಯೇ ಶಾಲೆಯ ಸುರಕ್ಷತೆಯನ್ನು ಖಚಿತಪಡಿಸುವುದು ಶಿಕ್ಷಣ ಇಲಾಖೆ ಹಾಗೂ ಜಿಲ್ಲಾಡಳಿತದ ಹೊಣೆಗಾರಿಕೆಯಾಗಿದೆ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101